


# ಭೃಗುವಾಣಿ

ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 32 | ಅಕ್ಟೋಬರ್ – ಡಿಸೆಂಬರ್ 2019 | ರೂ. 10/– | ಸಂಚಿಕೆ 03



**ಕೃಷ್ಣಕೈರಾದ ಪೇಜಾವರ ಮಠಾಧೀಶ ಪೂಜ್ಯ ಶ್ರೀ ವಿಶ್ವೇಶತೀರ್ಥ ಶ್ರೀಪಾದರಿಗೆ ಭಕ್ತಿಪೂರ್ವಕ ಶ್ರದ್ಧಾಂಜಲಿ**



ಬಳಗದ ತುಳಸಿ ಸಂಕೀರ್ತನೆ



ಬ್ಯಾಡ್ಮಿಂಟನ್ ಲೀಗ್-2019



ಕ್ಯಾಲೆಂಡರ್-2020 ಬಿಡುಗಡೆ

ಒಂದು ದಿನದ ಪ್ರವಾಸ



ಮಹಿಳಾ ವಿಭಾಗದಿಂದ ಪ್ರವಾಸ



ಗಮನಿಸಿ ► ಆನಂದ ಬಳಗದ ವಾರ್ಷಿಕೋತ್ಸವ : 01.3.2020

*With best compliments from :*

# TEDMAG
# ENGINEERING & MANAGEMENT CONSULTANTS (P) LTD.

**SWAGAT, 1209, 11th CROSS,**
**HSR LAYOUT SECTOR I,**
**BANGALORE – 560 102.**

**TEL.: +91 (0)80 22586129**
**FAX: +91 (0)80 22589134**

**E-mail:**
**Bangalore : tedmagemc@hotmail.com**
**sridhar_bhat@yahoo.com**
**Chennai : myram47@gmail.com**
**Mumbai : mindi1940@yahoo.com**

---

- **MILK PROCESSING**
- **FOOD PROCESSING**
- **PLANT TISSUE CULTURE**
- **ALLIED INDUSTRIES**


For sure
relief from
CONSTIPATION
Non Habit forming
Anuloma®
DS Tablets / Churna
Anuloma DS
Anuloma
Arthnex®
Oil / Emulgel
Improved
In Arthritis &
Musculoskeletal
pain
...For safe and comprehensive
management of pain
Arthnex
Available at all Ayurvedic Medical Stores
BPRL
Manufactured by
Bangalore Pharmaceutical & Research Laboratory (P) Ltd.
No.163, Reservoir Street, Basavanagudi, Bengaluru - 560 004. INDIA
Consumer Care No. : 080-41208661 | Website: www.bprl.in

Bhruguvani (Oct-Dec 2019) Regd. with RNI under No.KARKAN/2012/45587 No. of Pages : 36 (32+4)




If undelivered please return to:
**Ananda Balaga**
Hotel Ajantha Complex, 22A, M.G. Road
Bengaluru - 560 001
Phone : 2559 4457

Published by Smt. Geetha.V.Rao, President, Ananda Balaga, Bengaluru - 560 001 Printed by Omkar Offset Printers, Bengaluru - 02

ಭೃಗುವಾಣಿ
ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 32 ಸಂಚಿಕೆ 03

ಅಧ್ಯಕ್ಷರು :
**ಗೀತಾ ವಾಸುದೇವ ರಾವ್**

ಕಾರ್ಯದರ್ಶಿ :
**ಎಸ್. ಹರಿದಾಸ ಉಪಾಧ್ಯ**

ಸಂಪಾದಕರು :
**ಎಂ. ಸತ್ಯನಾರಾಯಣ ಭಟ್**

ಸಂಪಾದಕ ಮಂಡಳಿ :
**ಹರಿದಾಸ ಮುನ್ನೂರು**
**ಬಿ. ರಾಮದಾಸ ತಂತ್ರಿ**
**ಡಿ. ಶರತ್ ಕುಮಾರ ಭಟ್**
**ಕೆ.ಎನ್. ಅಡಿಗ**
**ರಂಜಿತ್ ಯಡಪಾಡಿತ್ತಾಯ**
**ವೈ. ಜಯಂತರಾವ್**
**ಟಿ.ಎಸ್. ನಾಗರಾಜ ಉಪಾಧ್ಯಾಯ**

ಸಲಹೆಗಾರರು :
**ಶ್ರೀಮತಿ ವಿಜಯಲಕ್ಷ್ಮಿ ಭಟ್**

ಜಾಹೀರಾತು ಸಮನ್ವಯ :
**ಶ್ರೀ ವೈ. ರಾಧಾಕೃಷ್ಣ**
**ಶ್ರೀ ಬಿ.ಎಸ್. ಬಾಲಚಂದ್ರ ತೋಳ್ಪಾಡಿ**

ಛಾಯಾಚಿತ್ರಗಳು
**ಕೆ. ಬಾಲಕೃಷ್ಣ ಉಪಾಧ್ಯಾಯ**
**ಮಟ್ಟಿ ರಾಮಚಂದ್ರರಾವ್**

ವಿಳಾಸ :
**ಆನಂದ ಬಳಗ**
ಹೋಟೆಲ್ ಅಜಂತಾ ಆವರಣ
22ಎ, ಎಂ.ಜಿ. ರಸ್ತೆ
ಬೆಂಗಳೂರು – 560 001
ದೂರವಾಣಿ : 2559 4457

Website:
www.anandabalaga.org

# ಅಧ್ಯಕ್ಷರ ಮಾತು



ಸಹೃದಯ ಸದಸ್ಯ ಬಾಂಧವರೇ,

ಹಳೆ ಇಸವಿ 2019 ಕಳೆದು ಹೊಸ ಇಸವಿ 2020 ಬರುತ್ತಿದೆ. ಆದರೆ ವರುಷದ ಅಂತ್ಯದಲ್ಲಿ ನಮ್ಮ ಸಮಾಜಕ್ಕೆ ಅತ್ಯಂತ ಆಘಾತಕಾರಿ ಘಟನೆ ನಡೆದೇಹೋಯಿತು. ವಿಶ್ವಗುರು, ಸಂತಶ್ರೇಷ್ಠ, ಯತಿಕುಲತಿಲಕರಾಗಿದ್ದ ಪೇಜಾವರ ಹಿರಿಯ ಮಠಾಧೀಶ ಪರಮಪೂಜ್ಯ ವಿಶ್ವೇಶತೀರ್ಥ ಶ್ರೀಪಾದರು ದಿ. 29.12.2019 ರಂದು ಕೃಷ್ಣಕ್ಯೆ ಆಗಿರುವುದು ನಮ್ಮ ನಾಡಿಗೆ ಮಾತ್ರವಲ್ಲ ರಾಷ್ಟ್ರಕ್ಕೆ ತುಂಬಲಾರದ ನಷ್ಟ. ಆಧ್ಯಾತ್ಮದ ಜೊತೆ ಸಮಾಜವನ್ನೂ ಬೆಸೆದ ಸಂತ ಪರಂಪರೆಯ ಮೇರುಕೊಂಡಿಯಾಗಿದ್ದ ಪೂಜ್ಯ ಶ್ರೀಗಳು ಐದು ಬಾರಿ ಕೃಷ್ಣಮಠದ ಪರ್ಯಾಯ ನೆರವೇರಿಸಿ ದಾಖಲೆ ನಿರ್ಮಿಸಿದವರು. ಅಸಮಾನತೆ ಮತ್ತು ಅಸ್ಪೃಶ್ಯತೆ ವಿರುದ್ಧ ಸುಮಾರು ಎಂಟು ದಶಕಗಳ ಕಾಲ ನಿರಂತರ ಹೋರಾಟ ನಡೆಸುತ್ತಾ ಬಂದಿರುವ ಪೂಜ್ಯರು ಇವನಾರವ, ಇವನಾರವ ಎಂಬ ನಕಾರಾತ್ಮಕ ದೃಷ್ಟಿಗಿಂತ, ಇವ ನಮ್ಮವ, ಇವ ನಮ್ಮವ ಎಂಬ ಸಕಾರಾತ್ಮಕ ಭಾವನೆಯನ್ನು ಮೈಗೂಡಿಸಿದ್ದ ವಿಷ್ಣು ಸ್ವರೂಪಿ. ವಿಶ್ವೇಶತೀರ್ಥರು ಆನಂದ ಬಳಗದ ಪ್ರಾರಂಭಕ್ಕೆ ನಾಂದಿ ಹಾಡಿ ಹರಸಿದ್ದು ಅಲ್ಲದೆ ಸಂದರ್ಭ ಸಿಕ್ಕಿದಾಗಲೆಲ್ಲಾ ಅತ್ಯಂತ ಅಭಿಮಾನದಿಂದ ಬಳಗದ ಕಾರ್ಯಕ್ರಮಗಳಿಗೆ ಆಗಮಿಸಿ ಬಳಗವನ್ನು ಮತ್ತು ಸದಸ್ಯರನ್ನು ಅನುಗ್ರಹ ಮಾಡುತ್ತಿದುದು ನಮ್ಮೆಲ್ಲರ ಪುಣ್ಯವಿಶೇಷ ಎನ್ನಲೇಬೇಕು. ಕಳೆದವರ್ಷ ಧಾರ್ಮಿಕ ವಿಭಾಗವು ನಡೆಸಿದ ದುರ್ಗಾ ನಮಸ್ಕಾರ ಮತ್ತು ತುಳಸೀ ಸಂಕೀರ್ತನೆ ಈ ಎರಡೂ ಸಂದರ್ಭಗಳಲ್ಲಿ ತಮ್ಮ ದಿವ್ಯ ಉಪಸ್ಥಿತಿ ಮತ್ತು ನೀಡಿದ ಆಶೀರ್ವಚನಗಳು ಬಳಗಕ್ಕೆ ಶ್ರೀರಕ್ಷೆಯಾಗಲಿದೆ. ತಮ್ಮ ಕರ್ಮಭೂಮಿಯಾಗಿರುವ ಪೂರ್ಣಪ್ರಜ್ಞ ವಿದ್ಯಾಪೀಠದ ಆವರಣದಲ್ಲೇ ವೃಂದಾವನಸ್ಥ ರಾಗಿರುವ ಪೂಜ್ಯ ಶ್ರೀಗಳ ಪರಮಾನುಗ್ರಹ ನಮ್ಮ ಮೇಲಿರಲಿ, ಪೇಜಾವರ ಮಠದ ಕಿರಿಯ ಶ್ರೀಪಾದರಾದ ಪೂಜ್ಯ ವಿಶ್ವಪ್ರಸನ್ನ ತೀರ್ಥರು ಮುಂದಿನ ದಿನಗಳಲ್ಲಿ ಸದಾ ಬಳಗವನ್ನು ಹರಸುತ್ತಿರಲಿ ಎಂದು ನಮ್ಮ ಪ್ರಾರ್ಥನೆ.

ಇನ್ನು, ಬಳಗದ ಧಾರ್ಮಿಕ ವಿಭಾಗವು ದೀಪಾವಳಿ ಸಂದರ್ಭದಲ್ಲಿ ವಿದ್ಯಾಪೀಠದ ಸಹಯೋಗದಲ್ಲಿ ತುಳಸೀ ಸಂಕೀರ್ತನೆ ಕಾರ್ಯಕ್ರಮವನ್ನು ಏರ್ಪಡಿಸಿದ್ದು, ಇಂತಹ ಧಾರ್ಮಿಕ ಆಚರಣೆಗಳು ನಮ್ಮ ಸದಸ್ಯರಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಹೆಚ್ಚಿಸಲು ಪೂರಕವಾಗಲಿದೆ. ಯುವ ವಿಭಾಗ ಏರ್ಪಡಿಸಿದ್ದ ಆನಂದ ಬಳಗ ಬ್ಯಾಡ್ಮಿಂಟನ್ ಲೀಗ್ ಹಾಗೂ ಸಾಂಸ್ಕೃತಿಕ ವಿಭಾಗ ಸಂಯೋಜಿಸಿದ್ದ ಒಂದು ದಿನದ ಪ್ರವಾಸವೂ ಸದಸ್ಯರಿಗೆ ಖುಷಿ ನೀಡಿದೆ. ಯುವ ವಿಭಾಗದವರು ಹೊರತಂದಿರುವ 2020ರ ಕ್ಯಾಲೆಂಡರ್ ಸುಂದರವಾಗಿ ವಿನ್ಯಾಸಗೊಂಡಿದ್ದು, ಈಗಾಗಲೇ ಎಲ್ಲಾ ಸದಸ್ಯರ ಮನೆ ಸೇರಿದೆ ಎಂದು ನಮ್ಮ ನಂಬಿಕೆ.

ನಮ್ಮ ಬಳಗದ ವಾರ್ಷಿಕೋತ್ಸವ ದಿ. 1.3.2020 ರಂದು ಹೋಟೆಲ್ ಉಡ್‌ಲ್ಯಾಂಡ್ಸ್‌ನಲ್ಲಿ ನೆರವೇರಲಿದೆ. ಸದಸ್ಯರೆಲ್ಲಾ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕಾಗಿ ಅಪೇಕ್ಷೆ.

ನಮ್ಮೂರು ಉಡುಪಿಯಲ್ಲಿ ಪಲಿಮಾರು ಮಠಾಧೀಶರಾದ ಪೂಜ್ಯ ವಿದ್ಯಾಧೀಶ ಶ್ರೀಪಾದರ ಪರ್ಯಾಯ ಮುಕ್ತಾಯವಾಗಲಿದ್ದು, ಅದಮಾರು ಮಠದ ಕಿರಿಯ ಶ್ರೀಪಾದರಾದ ಪೂಜ್ಯ ಈಶಪ್ರಿಯ ತೀರ್ಥ ಶ್ರೀಪಾದರು ಸರ್ವಜ್ಞ ಪೀಠವನ್ನು ಅಲಂಕರಿಸಿ ಮುಂದಿನ ಎರಡು ವರ್ಷಗಳ ಕಾಲ ಶ್ರೀಕೃಷ್ಣನ ಸೇವೆಯನ್ನು ಮಾಡಲಿದ್ದಾರೆ. ಉಭಯ ಶ್ರೀಪಾದರಿಗೂ ಬಳಗದ ಭಕ್ತಿಪೂರ್ವಕ ಪ್ರಣಾಮಗಳು. ಪೊಡವಿಗೊಡೆಯನಾದ ಶ್ರೀಕೃಷ್ಣ ಸರ್ವರಿಗೂ ಸನ್ಮಂಗಳವನ್ನುಂಟು ಮಾಡಲಿ.

– ಗೀತಾ ವಾಸುದೇವರಾವ್

**Executive Committee Members : 2018-2020**

| Name | Contact Numbers |
|---|---|
| ***President*** | |
| Geetha Vasudeva Rao | 98808 99997 |
| ***Vice President*** | |
| B. Ramachandra Upadhya | 99024 00072 |
| Smt. Vijayalakshmi Bhat S. | 98441 52107 |
| ***Secretary*** | |
| S. Haridas Upadhya | 94480 01892 |
| ***Joint Secretary*** | |
| A. Sandeep Rao | 98450 98150 |
| ***Treasurer*** | |
| Y. Radhakrishna | 98440 58851 |
| ***Asst. Treasurer*** | |
| B.S. Balachandra Tolpadi | 94481 34268 |
| ***Convener, Cultural Wing*** | |
| H. Ramesh Bhat | 98450 24708 |
| ***Convener, Religious Wing*** | |
| Y. Jayantha Rao | 94482 74519 |
| ***Convener, Youth Wing*** | |
| M. Krishna Prasad | 98450 18183 |
| ***Convener, Edn. Assistance Program*** | |
| Sharath Chandra S.N. | 98860 40271 |
| ***Convener, Public Relation Wing*** | |
| K.N. Adiga | 94488 48154 |
| ***Convener, Membership Devt. Wing*** | |
| M.K. Gurumurthy | 98440 22692 |
| ***Convener, Community Services*** | |
| P.C. Rao | 98444 46309 |
| ***Convener, Media & Communications*** | |
| M. Dinesh Rao | 98456 88955 |
| ***Editor, Brughu Vani*** | |
| M. Sathyanarayana Bhat | 99458 02607 |
| ***Members*** | |
| Kasturi Aithal | 98803 98353 |
| ***Co-opted Members*** | |
| Geetha P.R. Rao | 99459 38411 |
| M Mohan Rao | 98453 79956 |
| Jayaprakash Mady | 98450 09669 |
| ***Permanent Invitees / Past Presidents*** | |
| P.S. Bagilthaya | 98440 83582 |
| K. Vasudeva Rao | 98450 57111 |
| UAP Ballal | 2226 7609 |
| STR Madi | 99029 77948 |
| ***Special Invitees*** | |
| T.S. Nagaraja Upadhyaya | 93412 26763 |
| Sudha M Rao | 99011 27738 |
| U V Krishna Murthy | 98440 24136 |
| Dr. (Smt.) Veena Sharath | 99860 80271 |
| Y. Sripathy Bhat | 65626972 |
| K. Gopala Krishna | 99801 28049 |
| Madhavi Ballal | 99860 39107 |

ಒಳಪುಟಗಳಲ್ಲಿ.....


ಅಧ್ಯಕ್ಷರ ಮಾತು ... 1

ಪೂಜಾವರ ಶ್ರೀಗಳಾದ ಪೇಜಾವರ ಶ್ರೀಗಳು ... 3

ಬಳಗದಿಂದ ತುಳಸೀ ಸಂಕೀರ್ತನೆ ಹಾಗೂ ಕ್ಯಾಲೆಂಡರ್ ಬಿಡುಗಡೆ ... 7

ಯಶಸ್ವೀ ಬ್ಯಾಡ್ಮಿಂಟನ್ ಲೀಗ್ ... 10

ಬಳಗದ ಅವಿಸ್ಮರಣೀಯ ಪ್ರವಾಸ ... 11

ಉಡುಪಿ ಕೃಷ್ಣ ಪೊಡವಿಗೊಡೆಯ ... 13

ಮಹಿಳಾ ವಿಭಾಗದ ಪ್ರವಾಸ ... 15

ಜೀವನ ಮಾರ್ಗಗಳು ... 19

ಪುಸ್ತಕ ಬಿಡುಗಡೆ ಹಾಗೂ ಅಭಿನಂದನೆ ... 21

ಸುದ್ದಿ ಸಂಗ್ರಹ ... 23


ಭೃಗುವಾಣಿ ತ್ರೈಮಾಸಿಕದಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳ ಪೂರ್ಣ ಜವಾಬ್ದಾರಿಯು ಲೇಖಕರದ್ದೇ ಆಗಿರುತ್ತದೆ, ವಿನಹ ಸಂಪಾದಕ ಮಂಡಳಿಯದಲ್ಲ.

## ಸದಸ್ಯರಲ್ಲಿ ಮನವಿ

ಭೃಗುವಾಣಿ ನಿಮ್ಮ ಪತ್ರಿಕೆ. ನೀವು ಕಳುಹಿಸುವ ಲೇಖನ, ಕವನ, ಸಾಧನೆ-ಪರಿಚಯ, ಫೋಟೋಗ್ರಾಫ್, ಚುಟುಕು, ಹಾಸ್ಯ ಚಟಾಕಿ. ಮೊದಲಾದುವುಗಳಿಗೆ ಪ್ರಥಮ ಪ್ರಾಶಸ್ತ್ಯ. ಅದಲ್ಲದೆ ಸದಸ್ಯರ ಕುಟುಂಬದಲ್ಲಿ ನಡೆದ ಯಾವುದೇ ಸಮಾರಂಭದ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಅಥವಾ ಆಮಂತ್ರಣ ಪತ್ರಿಕೆಯನ್ನು ಕಳುಹಿಸಿದರೆ, ಸುದ್ಧಿ-ಸಂಗ್ರಹ ಅಂಕಣದಲ್ಲಿ ಪ್ರಕಟಿಸಲು ಅನುಕೂಲ.

ಭೃಗುವಾಣಿ ಪತ್ರಿಕೆಯಲ್ಲಿ ನಿಮ್ಮದೂ ಪಾಲು ಇರಲಿ.. ಪ್ರಕಟಣೆಗೆ ಪರಿಗಣಿಸಲು ಲೇಖನ ಮತ್ತಿತರ ವಿಚಾರಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದಾಗಿದೆ :

**ಎಂ. ಸತ್ಯನಾರಾಯಣ ಭಟ್**
"ಕೃಷ್ಣ ಕೃಪಾ", 12/1, 5ನೇ ಮೈನ್, ಇಟ್ಟುಮಡು
ಬನಶಂಕರಿ 3ನೇ ಸ್ಟೇಜ್, ಬೆಂಗಳೂರು-560 085
E-mail: msbhat1958@gmail.com

# "ಪೂಜಾವರ" ಶ್ರೀಗಳಾದ ಪೇಜಾವರ ಶ್ರೀಗಳು

**ನಮ್ಮ ರಾಷ್ಟ್ರ ಕಂಡ ಶ್ರೇಷ್ಠ ಸಂತ, ಉಡುಪಿಯ ಪೇಜಾವರ ಅದೋಕ್ಷಜ ಮಠದ 32ನೇ ಯತಿ ಶ್ರೀ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ದಿ. 29.12.2019 ರಂದು ಹರಿಪಾದ ಸೇರಿದ್ದಾರೆ. ಪೂಜ್ಯ ಪೇಜಾವರ ಶ್ರೀಯವರು ಇಂದು ನಮ್ಮ ಮುಂದೆ ಇಲ್ಲವಾದರೂ ಲಕ್ಷಾಂತರ ಭಕ್ತರ ಹೃದಯ–ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಧಾರ್ಮಿಕ ಹಾಗೂ ಸೇವಾಕ್ಷೇತ್ರದಲ್ಲಿ ಮೇರುವ್ಯಕ್ತಿತ್ವವಾಗಿದ್ದ ಪೂಜ್ಯರು ಸಮಾಜದ ಒಳಿತಿಗಾಗಿ ಅವಿರತ ಶ್ರಮಿಸಿದ ವಿಶ್ವಸಂತ. ಇಂತಹ ಮಹಾಚೇತನಕ್ಕೆ ಭಕ್ತಿಪೂರ್ವಕ ಪ್ರಣಾಮಗಳನ್ನು ಅರ್ಪಿಸುತ್ತಾ, ಭೃಗುವಾಣಿಯ ಪ್ರಮುಖ ಲೇಖಕರಾದ ಹಾಗೂ ಖ್ಯಾತ ವಾಗ್ಮಿ, ಆಧ್ಯಾತ್ಮಿಕ ಚಿಂತಕ ಮತ್ತು ಸಾಹಿತಿಗಳಾದ ಡಾ.ಕೆ.ಪಿ. ಪುತ್ತೂರಾಯರು ತಮ್ಮದೇ ಆದ ಶೈಲಿಯಲ್ಲಿ ನುಡಿನಮನಗಳನ್ನು ಸಲ್ಲಿಸಿದ್ದಾರೆ – ಸಂ.**

ತನ್ನ 7ನೇ ವಯಸ್ಸಿನಲ್ಲೇ ಸನ್ಯಾಸ ದೀಕ್ಷೆಯನ್ನು ಪಡೆದು ಉಡುಪಿಯ ಕೃಷ್ಣ ಮಠದಲ್ಲಿ 5 ಪರ್ಯಾಯಗಳನ್ನು ಪೂರೈಸಿದ ಮೊದಲ ಯತಿಯಾಗಿ, ತಾ. 29.12.19 ರಂದು ವೃಂದಾವನಸ್ಥರಾದ ವಿಶ್ವಸಂತ ಶ್ರೀ ವಿಶ್ವೇಶತೀರ್ಥರು ಬರೇ ಓರ್ವ ವ್ಯಕ್ತಿಯಾಗಿರಲಿಲ್ಲ; ಈ ಶತಮಾನವು ಕಂಡ ಒಂದು ಮಹಾನ್ ಶಕ್ತಿಯಾಗಿದ್ದರು. ಓರ್ವ ಯತಿಯಾಗಿ ಯತಿಕುಲ ಧರ್ಮವನ್ನು ಅಕ್ಷರಶಃ ಪಾಲಿಸಿ, ಯತಿಕುಲ ಪರಂಪರೆಗೇ ಶೋಭೆಯನ್ನು ತಂದವರು. ತನ್ನ ದೇಹವನ್ನು ದಂಡಿಸಿದರು; ಧರ್ಮವನ್ನು ಮಂಡಿಸಿದರು; ಯಾವತ್ತೂವೆ ಅಧರ್ಮವನ್ನು ಖಂಡಿಸಿದರು. ಎಂದೂ ಎಲೆ ತುಂಬಾ ಊಟ ಮಾಡಿದವರಲ್ಲ; ಕುರ್ಚಿ ತುಂಬಾ ಕೂಡಿದವರಲ್ಲ; ಕಣ್ತುಂಬಾ ನಿದ್ದೆ ಮಾಡಿದವರಲ್ಲ. ಚಾಪೆಯ ಮೇಲೆ ಮಲಗಿ, ಹಕ್ಕಿಯಂತೆ ನಿದ್ದೆ; ಹಕ್ಕಿಯಂತೆ ಊಟ; ಹಕ್ಕಿಯಂತೆ ಹಾರಾಟ. ಸದಾ ಚಲನಶೀಲರು ಹಾಗೂ ಪ್ರಯೋಗಶೀಲರು. ಗುಣಸ್ವಭಾವದಲ್ಲಿ ಇವರದು ಮಕ್ಕಳಂತಹ ಮನಸ್ಸು. ಅದಕ್ಕೇ ಹೇಳುವವರು "ಹುಟ್ಟುವಾಗ ಭಗವಂತ ನಮಗೆ ಮಕ್ಕಳಂತಹ ಮನಸ್ಸನ್ನು ಕೊಟ್ಟ. ಮನುಷ್ಯನ ಮನಸ್ಸೆಂದರೆ, ಗುಣದ ತೊಟ್ಟಿಲೂ ಆಗಬಹುದು; ಕಸದ ತೊಟ್ಟಿಯೂ ಆಗಬಹುದು. ದುರ್ಗುಣ, ದುರಾಸೆಗಳಿಂದ ಮನಸ್ಸನ್ನು ರಾಡಿ ಮಾಡಿಕೊಳ್ಳದೆ, ಕೊನೆತನಕ ಮಕ್ಕಳ ಮನಸ್ಸಿನಂತೆ ಇರುವಂತೆ ಕಾಪಾಡಿಕೊಳ್ಳಿ." ಉತ್ಸಾಹ ಉಲ್ಲಾಸಗಳಲ್ಲಿ ಇವರದು ಯುವಕರೂ ನಾಚುವಂತಹ ಹುಮ್ಮಸ್ಸು." ವಯಸ್ಸಾಗೋದು, ಬರೇ ಮುಪ್ಪಿನಿಂದಲ್ಲ; ನಮ್ಮೊಳಗಿನ ಲವಲವಿಕೆಯ ಚಿಲುಮೆ ಬತ್ತಿದಾಗ" ಎನ್ನುವವರು. ಜ್ಞಾನ ಪರಿಜ್ಞಾನಗಳಲ್ಲಿ ಇವರಿಗೆ ವೃದ್ಧರ ವರ್ಚಸ್ಸು. ವೃದ್ಧರೆಲ್ಲಾ ಜ್ಞಾನವೃದ್ಧರೇ ಆಗಬೇಕೆಂದಿಲ್ಲ; ಮುದುಕರಾಗುತ್ತಾರೆ ಅಷ್ಟೆ; ಶ್ರೀಗಳು ಮಾತ್ರ ವಯೋವೃದ್ಧರೂ, ಜ್ಞಾನವೃದ್ಧರೂ ಆಗಿದ್ದರು. ಈ ಎಲ್ಲಾ ಕಾರಣಗಳಿಂದ ಅವರ ಮುಖದಲ್ಲಿ ಸದಾ ಇತ್ತು ಒಂದು ತೇಜಸ್ಸು. ಆ ಸಣ್ಣ ಶರೀರದಲ್ಲಿ ಅಷ್ಟೊಂದು ವಿದ್ವತ್ತು ಚೈತನ್ಯ ಎಲ್ಲಿಂದ ಬಂತು ಎಂಬುದು ಒಂದು ವೈದ್ಯಕೀಯ ವಿಸ್ಮಯ.




ಓರ್ವ ಮಠಾಧಿಪತಿಯಾಗಿ, ಪೇಜಾವರ ಮಠವನ್ನು ವಿಶ್ವದಾದ್ಯಂತ ಪರಿಚಯಿಸಿದರು, ಸರ್ವತೋಮುಖವಾಗಿ ಬೆಳಸಿದರು. ಮಠಗಳೆಂದರೆ ಬರೇ ಊಟದ ಕೇಂದ್ರಗಳಾಗಬಾರದು, ಆಧ್ಯಾತ್ಮಿಕ–ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ ಸಾಮರಸ್ಯವನ್ನೂ ತರುವ ಕೇಂದ್ರಗಳಾಗಬೇಕು ಎಂದು ಬಯಸಿ, ದೇಶದಾದ್ಯಂತ ಅನಾಥಾಶ್ರಮ, ವೃದ್ಧಾಶ್ರಮ, ಆರೋಗ್ಯಧಾಮ ವಿದ್ಯಾಪೀಠಗಳನ್ನು ಸ್ಥಾಪಿಸಿದರು. ಓರ್ವ ಧಾರ್ಮಿಕ ಗುರುವಾಗಿ, ಮಧ್ವಮತವನ್ನು ಪಸರಿಸಿದರು. ಓರ್ವ ವಿದ್ಯಾಗುರುವಾಗಿ, ತಪ್ಪದೇ ಸಹಸ್ರಾರು ಶಿಷ್ಯರಿಗೆ ಸುಧಾಮಂಗಳವನ್ನು ಬೋಧಿಸಿದರು. ಓರ್ವ ಸಾಮಾಜಿಕ ವೈದ್ಯನಾಗಿ, ಅಸಮಾನತೆ, ಅಸ್ಪೃಶ್ಯತೆಯ ವಿರುದ್ಧ, ದಲಿತರ ಕೇರಿಗೆ ಹೋಗಿ ತಮ್ಮ ಜಾತ್ಯಾತೀತ ಮನೋಭಾವವನ್ನು ವ್ಯಕ್ತಪಡಿಸಿದರು. ಸಾಮಾಜಿಕ ಶಾಂತಿ, ಐಕ್ಯತೆಗೆ ಧಕ್ಕೆ ಉಂಟಾದಾಗ ಯಾವುದೇ ಭಯ ಭೀತಿ ಇಲ್ಲದೆ ದನಿ ಎತ್ತಿದರು. ವೀರಶೈವ ಲಿಂಗಾಯತ ಧರ್ಮಗಳೆರಡೂ ಒಂದೇ ಹಿಂದೂ ಧರ್ಮದ ಶಾಖೆಗಳೆಂದು ಧೈರ್ಯವಾಗಿ ಹೇಳಿದರು. ಒಟ್ಟಿನಲ್ಲಿ ಸಾಮಾಜಿಕ ಕಳಕಳಿಯನ್ನು ಬರೇ

ಕೊರಳಿನಂದಲ್ಲ; ಕರುಳಿನಿಂದ ಹೊಂದಿದ್ದರು. ಅಂತೆಯೇ ಓರ್ವ ಜವಾಬ್ದಾರಿಯುತ ಪ್ರಜೆಯಾಗಿ, ದೇಶದ ರಾಜಕೀಯ ವಿದ್ಯಾವಾನಗಳನ್ನು ಸೂಕ್ಷ್ಮವಾಗಿ ತಿಳಿದುಕೊಂಡಿದ್ದರು. ಆದರೆ ಎಂದೂ ರಾಜಕಾರಣವನ್ನು ಮಾಡಿದವರಲ್ಲ. ತುರ್ತು ಪರಿಸ್ಥಿತಿಯನ್ನು ಹೇರಿದ್ದ ಶ್ರೀಮತಿ ಇಂದಿರಾಗಾಂಧಿ ಯವರೇ ಮೊದಲಾಗಿ ತಪ್ಪು ಕೆಲಸಗಳನ್ನು ಮಾಡುವ ಎಲ್ಲ ರಾಜಕಾರಣಿಗಳನ್ನು ಎಚ್ಚರಿಸಿದರು ಹಾಗೂ ಪಕ್ಷಾತೀತವಾಗಿ ಎಲ್ಲ ರಾಜಕಾರಣಿಗಳಿಗೆ ಕಾಲಕಾಲಕ್ಕೆ ಮಾರ್ಗದರ್ಶನ ಮಾಡುತ್ತಲೇ ಬಂದರು. ಇವರದು ಧರ್ಮಪರವಾದ ಪಕ್ಷವಾಗಿತ್ತು; ದೇಶದ ಹಿತವನ್ನು ಕಾಪಾಡುವ ಪಕ್ಷವಾಗಿತ್ತು. ಶ್ರೀಗಳ ರಾಜಕೀಯ ಪ್ರಜ್ಞೆ ಮತ್ತು ಆಸಕ್ತಿಯ ಕುರಿತಾಗಿ ಒಮ್ಮೆ ಮಾಜೀ ಮುಖ್ಯಮಂತ್ರಿ ದಿ॥ ಗುಂಡೂರಾಯರು ಹೀಗೆ ಹೇಳಿದ್ದರು "ಶ್ರೀಗಳು ಸನ್ಯಾಸವನ್ನು ತೊರೆದು ರಾಜಕೀಯ ಕ್ಷೇತ್ರವನ್ನು ಪ್ರವೇಶ ಮಾಡದಿರೋದು ನಮ್ಮ ಪುಣ್ಯ. ಇಲ್ಲದಿದ್ದರೆ ನಾನೆಲ್ಲಿ ಮುಖ್ಯಮಂತ್ರಿ ಆಗುತ್ತಿದ್ದೆ?" ಅಂತೆಯೇ 22 ಕ್ಯಾರೆಟ್ ಅಪ್ಪಟ ಭಾರತೀಯನಾಗಿ, ದೇಶಪ್ರೇಮವನ್ನು ತನ್ನ ರಕ್ತದ ಕಣಕಣದಲ್ಲೂ ಹರಿಯಬಿಟ್ಟಿದ್ದರು ಹಾಗೂ ಎಲ್ಲರಲ್ಲೂ ಜಾಗೃತಗೊಳಿಸಿದರು. ಅಯೋಧ್ಯೆಯಲ್ಲಿ ರಾಮ ಮಂದಿರದ ನಿರ್ಮಾಣ ಶ್ರೀಗಳ ದಿನನಿತ್ಯದ ಕನಸಾಗಿತ್ತು. ಅದು ನನಸಾಗುತ್ತಿರುವ ಸಮಯದಲ್ಲಿ, ಅವರೇ ಇಲ್ಲವಲ್ಲಾ ಎಂಬುದು ದುಃಖದ ಸಂಗತಿ. ಹಿಂದುತ್ವವೆಂದರೆ ಒಂದು ಜೀವನ ಪದ್ಧತಿ ಎಂಬುದು ಅವರ ವಾದವಾಗಿತ್ತು, ಸಿದ್ಧಾಂತವಾಗಿತ್ತು.

ಇನ್ನು ಸಂಧರ್ಭೋಚಿತವಾಗಿ, ಸ್ವಾರಸ್ಯಕರವಾಗಿ, ವೇದಶಾಸ್ತ್ರ, ಪುರಾಣಗಳ ಕತೆಗಳನ್ನಾಧರಿಸಿ ಮಾತನಾಡುತ್ತಿದ್ದ ಶ್ರೀಗಳು 'ಅತ್ಯುತ್ತಮವಾಗ್ಮಿ ಎಂಬುದು ಅವರ ಆಶೀರ್ವಚನಗಳನ್ನು ಕೇಳಿದವರಿಗೆ ಗೊತ್ತು. ಒಂದು ದಿನದಲ್ಲಿ ನಾಲ್ಕಾರು ಕಾರ್ಯಕ್ರಮಗಳಿರಲಿ, ಹಲವಾರು ದಶಕಗಳಿಂದ ಸಹಸ್ರಾರು ಸಭೆ ಸಮಾರಂಭಗಳಲ್ಲಿ ಸಮಯೋಚಿತವಾಗಿ ಅವರು ಆಡಿದ ಒಂದೊಂದು ಮಾತುಗಳು ಅತಿ ಸುಂದರ, ಅಷ್ಟೆ ಅರ್ಥಗರ್ಭಿತ. ಸಂಗ್ರಹಿಸಿ ಒಂದು ಪುಸ್ತಕ ರೂಪದಲ್ಲಿ ಹೊರತರಲು ಯೋಗ್ಯವಾದ ಈ ನುಡಿಮುತ್ತುಗಳ ಪೈಕಿ ಕೆಲವನ್ನಷ್ಟೆ ಬರೆಯುತ್ತಿದ್ದೇನೆ. 50 ವರುಷಗಳ ಸಂಪರ್ಕದಿಂದ ಇದು ಸಾಧ್ಯವಾಗುತ್ತಿದೆ ಎಂಬುದನ್ನು ನಾನು ಬೇರೆ ಹೇಳಬೇಕಾಗಿಲ್ಲ.

ಭಾರತೀಯ ಸಂಸ್ಕೃತಿಯ ಬಗ್ಗೆ ವ್ಯಾಖ್ಯಾನಿಸುತ್ತಾ ಶ್ರೀಗಳು ಹೇಳಿದರು " ಭಾರತೀಯ ಸಂಸ್ಕೃತಿ ಎಂದರೆ ಒಂದು ಮಹಾ ವೃಕ್ಷವಿದ್ದಂತೆ. ಈ ವೃಕ್ಷವನ್ನು ಉಳಿಸಿ ಬೆಳಸಬೇಕಾದರೆ, ಮರದ ಕೊಂಬೆಗಳಿಗೆ ನೀರೆರೆದರೆ ಪ್ರಯೋಜನವಾಗಲಾರದು, ಬುಡಕ್ಕೆ ನೀರೆರೆಯಬೇಕು, ಮಾತ್ರವೇ ಅಲ್ಲ; ಎಲ್ಲಾ ಸಂಸ್ಕೃತಿಗಳನ್ನು ನಾವು ಪ್ರೀತಿಸಬೇಕು, ಆದರೆ ನಮ್ಮ ಸಂಸ್ಕೃತಿಯಲ್ಲಿ ಜೀವಿಸಬೇಕು" ಮಂತ್ರಗಳ ಹಿರಿಮೆಯನ್ನು ಸಾರುತ್ತಾ ಹೇಳಿದರು" ಯಂತ್ರಗಳ ಶಬ್ದದಿಂದ ಪರಿಸರ ಮಲಿನವಾದರೆ ಮಂತ್ರಗಳ ಶಬ್ದದಿಂದ ಪರಿಸರ ಪಾವನವಾಗುತ್ತದೆ.

ಯತಿಗಳಾದವರು ಹೇಗಿರಬೇಕೆಂಬುದರ ಬಗ್ಗೆ ಹೀಗೆ ಅಪ್ಪಣೆ ಕೊಡಿಸಿದರು "ಯತಿಗಳು ಮೋಡಗಳಂತಿರಬೇಕು. ಹೇಗೆ ಭೂಮಿಯ ಮೇಲಿನ ಉಪ್ಪುನೀರು, ಕೊಚ್ಚೆನೀರು, ನಿಂತನೀರು ಎಲ್ಲವನೂ ಮೇಲಕ್ಕೆ ಹೀರಿ ಸ್ವಚ್ಛಗೊಳಿಸಿ, ಸಕಾಲದಲ್ಲಿ ಅಲ್ಲಲ್ಲಿ ಆಗಾಗಾ ಸಿಹಿ ನೀರನ್ನು ಮೋಡಗಳು ಸುರಿಸುತ್ತವೋ ಅಂತೆಯೇ ಕಷ್ಟಕರವಾದ ಕ್ಲಿಷ್ಟವಾದ ವಿಷಯಗಳನ್ನು ಅಧ್ಯಯನ ಮಾಡಿ ಸರಳೀಕರಿಸಿ ತಮ್ಮ ಶಿಷ್ಯರಿಗೆ ತಿಳಿಯಪಡಿಸೋದೇ ಯತಿಗಳ ಕೆಲಸ. "ಹೇರಿಸಿಕೊಂಡ ಸನ್ಯಾಸವಲ್ಲ; ಆರಿಸಿಕೊಂಡ ಸನ್ಯಾಸನೇ ಬಹುಕಾಲ ಬಾಳುತ್ತೆ" ಎಂಬುದಾಗಿ ಮಾರ್ಮಿಕವಾಗಿ ಹೇಳಿದರು. "ಸಮಾಜದಲ್ಲಿ ಇತರೇ ಧರ್ಮಗಳನ್ನು ಪ್ರೀತಿಸಲಾಗ ದಿದ್ದರೂ ಪರವಾಗಿಲ್ಲ; ಗೌರವಿಸಬೇಕು. ಅದುವೇ ಪರಧರ್ಮ ಸಹಿಷ್ಣುತೆ" "ಸಮಾಜದಲ್ಲಿ ಸಾಧು ಸಂತರು ಶ್ರೀಕೃಷ್ಣರಾಗಬೇಕು; ಅರ್ಜುನರಂತಿರುವ ಜನರಿಗೆ ಮಾರ್ಗದರ್ಶನ ಮಾಡುತ್ತಿರಬೇಕು" ಎಂದರು. ರಾಜಕೀಯದ ಬಗ್ಗೆ ಪ್ರಸ್ತಾಪಿಸುತ್ತಾ "ರಾಜಕೀಯ ಕ್ಷೇತ್ರದಲ್ಲಿ ಧರ್ಮದ ಅಂಕುಶವಿರಬೇಕು; ಆದರೆ ಧಾರ್ಮಿಕ ಕ್ಷೇತ್ರದಲ್ಲಿ ರಾಜಕಾರಣವಿರಬಾರದು ಎಂದರು. ಸಮಾಜ ಸೇವೆಯ ಬಗ್ಗೆ ತಿಳಿಸುತ್ತಾ "ನಾವು ಸರಕಾರದಿಂದ ಪಡೆದ



ಮಠಗಳೆಂದರೆ ಬರೀ ಊಟದ ಕೇಂದ್ರಗಳಾಗ ಬಾರದು ಆಧ್ಯಾತ್ಮಿಕ, ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಸಾಮರಸ್ಯವನ್ನು ಬೆಸೆಯುವ ಕೇಂದ್ರಗಳಾಗಬೇಕು – **ಪೇಜಾವರಶ್ರೀ**

ಸೌಕರ್ಯ ಸೌಲಭ್ಯಗಳಿಗೆ Tax ತೆರುವಂತೆ ಭಗವಂತನಿಂದ ಪಡೆದ ಕೃಪಾಕಟಾಕ್ಷಗಳಿಗೆ, ನಾವು ಅವನಿಗೆ ನೀಡುವ Tax ಎಂದರೆ ಸಮಾಜಸೇವೆ. ಅದುವೇ ಸ್ವರ್ಗಕ್ಕೆ ಹೋಗಲು ಬೇಕಾದ Visa. ಆದುದರಿಂದ, ದೇವರ ಹುಂಡಿಗೆ ನಾವು ಹಾಕುವ ಕಾಣಿಕೆ ಎಂದರೆ ಸಮಾಜಸೇವೆ" "ಭೌತಿಕ ಪ್ರಗತಿಯ ಜೊತೆ ಆಧ್ಯಾತ್ಮಿಕ ಪ್ರಗತಿಯೂ ಇರಲಿ; ಕಾರಣ ಅದು ಆತ್ಮದ ಪ್ರಗತಿ. ಎರಡರ ಪ್ರಗತಿಯಾದಾಗ ಮಾತ್ರ ನಿಜವಾದ ಪ್ರಗತಿ ಸಾಧ್ಯ. ಈ ಹಿನ್ನೆಲೆಯಲ್ಲಿ, ನಮ್ಮ ಸೌಕರ್ಯ ಸೌಲಭ್ಯಗಳು ಅತ್ಯಾಧುನಿಕವಾಗಿರಲಿ, ನವನವೀನವಾಗಿರಲಿ. ಆದರೆ ನಮ್ಮ ಮೌಲ್ಯಗಳು, ನೈತಿಕತೆ ಪ್ರಾಚೀನವಾಗಿರಲಿ. ಕಾರಣ ಅವು ಸರ್ವಕಾಲಿಕ ಸರ್ವಮಾನ್ನಿಕ ಸತ್ಯಗಳು''. "ಆಧುನಿಕತೆಗೆ ಕೊಂಚ ಆಧ್ಯಾತ್ಮಿಕತೆಯನ್ನು ಲೌಕಿಕತೆಗೆ ಧಾರ್ಮಿಕತೆಯನ್ನು ಪ್ರಾಪಂಚಿಕತೆಗೆ ಪಾರಮಾರ್ಥಿಕತೆ, ಯನ್ನು, ವಿಜ್ಞಾನಕ್ಕೆ ಸುಜ್ಞಾನವನ್ನು ಬೆರೆಸಿಕೊಂಡರೆ ಮಾತ್ರ ಜೀವನ ಸುಂದರ ಸಹ್ಯ"ವೆಂದರು. "ಮಕ್ಕಳ ಕುರಿತಾಗಿ ಹೇಳಿದರು" ನಮ್ಮ ಭವಿಷ್ಯವನ್ನು ನಿರ್ಧರಿಸೋದು ಆಕಾಶದಲ್ಲಿರುವ ನಕ್ಷತ್ರಗಳಾದರೆ, ನಮ್ಮ ದೇಶದ ಭವಿಷ್ಯವನ್ನು ನಿರ್ಧರಿಸುವವರು ಭೂಮಿಯ ಮೇಲಿರುವ ಮಕ್ಕಳು; ಅವರ ಬಗ್ಗೆ ಚಿಂತನೆ ಇರಲಿ" "ಉತ್ತಮರು ಮತ್ತು ಅತ್ಯುತ್ತಮರು ಎಂದರೆ ಯಾರು?" ಎಂಬ ಸಭಿಕರ ಪ್ರಶ್ನೆಗೆ ಶ್ರೀಗಳ ಉತ್ತರ ಹೀಗಿತ್ತು" ಕಷ್ಟದಲ್ಲಿರುವವರ ಕಣ್ಣೀರನ್ನು ಒರೆಸುವವರು ಉತ್ತಮರು. ಆದರೆ ಕಣ್ಣೀರೇ ಬಾರದಂತೆ ನೋಡಿಕೊಳ್ಳುವವರು ಅತ್ಯುತ್ತಮರು''. "ಸಿರಿತನ ಬದುಕನ್ನ ಬದಲಿಸುತ್ತದೆ; ಆದರೆ ಬಡತನ ಬದುಕೋದನ್ನು ಕಲಿಸುತ್ತದೆ" ಎಂಬುದು ಇವರ ಕಿವಿಮಾತಾಗಿತ್ತು. ಬ್ರಾಹ್ಮಣರನ್ನುದ್ದೇಶಿಸಿ ಹೇಳಿದರು ''ಬ್ರಾಹ್ಮಣ್ಯವಿಲ್ಲದ ಬ್ರಾಹ್ಮಣ, ಹೂರಣವಿಲ್ಲದ ಹೋಳಿಗೆಯಂತೆ, ಪರಿಮಳವಿಲ್ಲದ ಹೂವಿನಂತೆ. ಅಪೂರ್ಣ ಮಾತ್ರವಲ್ಲ ಅಪಾಯಕಾರಿ. ಆದುದರಿಂದ ಬ್ರಾಹ್ಮಣ ಜನ್ಮಕ್ಕೆ ಬ್ರಾಹ್ಮಣ್ಯವನ್ನು ಬೆರೆಸಿಕೊಳ್ಳಿ" ಶ್ರೀಗಳಲ್ಲಿ ನಯವಾದ ಹಾಸ್ಯಪ್ರಜ್ಞೆಯೂ ಇತ್ತು. ಇದಕ್ಕೆ ಕೆಲವು ಉದಾಹರಣೆಗಳೆಂದರೆ :

* ಒಂದು ಸಮಾರಂಭದಲ್ಲಿ ಸ್ವಾಗತ ಮಾಡುವವರು "ಈ ಜಗತ್ತಿಗೇ ಅತಿದೊಡ್ಡ ಯತಿಶ್ರೇಷ್ಠರು ಪೇಜಾವರ ಶ್ರೀಗಳು" ಎಂದಾಗ ಹಾಗೆಲ್ಲ ಹೇಳಿ ಈ ಜಗತ್ತನ್ನೇ ಚಿಕ್ಕದು ಮಾಡಬೇಡಿ ಎಂದು ಮಾರ್ಮಿಕವಾಗಿ ನುಡಿದರು.
* ಗಲಾಟೆ ಮಾಡುತ್ತಿದ್ದ ಸಭಿಕರನ್ನು ಉದ್ದೇಶಿಸಿ ಹೇಳಿದರು "ಒಂದು ಸಭೆಗೆ ಲಕ್ಷ ಜನರೇ ಬರಲಿ, ಬಂದ ಜನರ ಲಕ್ಷ್ಯ ಮುಖ್ಯ. ಕೇಳಲು ಆಸಕ್ತಿ ಇರುವವರ ಎದುರು ಮಾತನಾಡಿದರೆ ವೀಣೆಯ ತಂತಿಗಳನ್ನು ಮೀಟಿದಂತೆ'' ಸಭೆಯು ಸುಮ್ಮನಾಯಿತು.
* ಒಮ್ಮೆ ಖ್ಯಾತ ಸಂಗೀತಗಾರರಾದ ವಿದ್ಯಾಭೂಷಣರ



ನಮಗೆ ಕಾಡಿನಲ್ಲಿ ವಾಸಿಸುವ ವೈರಾಗ್ಯ ಬರದಿದ್ದರೂ, ಜೀವನದಲ್ಲಿ ನ್ಯಾಯದಿಂದ ಸಂಪಾದಿಸಿದ್ದರಲ್ಲಿ ತೃಪ್ತಿ ಪಡುವಷ್ಟಾದರೂ ವಿರಕ್ತಿ ಇರಬೇಕು

**– ಶ್ರೀವಿಶ್ವೇಶತೀರ್ಥರು**



ಮತ್ತೊಬ್ಬರ ಮನೆಯಲ್ಲಿ "ಇರುವಾಗ" ಯಾವ ವಸ್ತುವೂ ಇರುತ್ತದೆಯೋ, ಅದರಂತೆ ನಮ್ಮ ಮನೆಯಲ್ಲಿಯೂ ನಾವು ಅತಿಥಿಯಂತೆ " ಎಲ್ಲಾ ಭಗವಂತನದ್ದು" ಎಂಬ ಎಚ್ಚರದಿಂದ ಇರಬೇಕು **– ಪೇಜಾವರಶ್ರೀ**

## ಪೇಜಾವರ ಶ್ರೀಗಳು ತಮ್ಮ ಕೊನೆಯ ಪ್ರವಚನದಲ್ಲಿ ಹೇಳಿದ ಮಾರ್ಮಿಕ ನೀತಿ:

ಹಿಂದಕ್ಕೆ ಇಂದ್ರದ್ಯುಮ್ನ ಎಂಬ ಭಕ್ತರಾಜನೊಬ್ಬ ಗತಿಸಿದ ಮೇಲೆ ಅವನ ಪುಣ್ಯ ಪ್ರಭಾವದಿಂದ ಸ್ವರ್ಗವನ್ನು ಹೊಂದುತ್ತಾನೆ. ಬಹಳ ಕಾಲದ ನಂತರ ದೇವತೆಗಳು ಸ್ವರ್ಗದಲ್ಲಿ ಇರಲು ಬೇಕಾಗಿರುವಷ್ಟು ಪುಣ್ಯ ಸಂಚಯ ಈಗ ನಿನ್ನಲ್ಲಿ ಉಳಿದಿಲ್ಲ. ಅದು ಖಾಲಿಯಾಗಿದೆ ಎಂದು ಭೂಮಿಗೆ ಕಳುಹಿಸುತ್ತಾರೆ.

ಭೂಮಿಗೆ ಬಂದ ಇಂದ್ರದ್ಯುಮ್ನ, ತಾನು ರಾಜನಾಗಿದ್ದ ನೆನಪು ಯಾರಿಗಾದರೂ ಇದೆಯೇ ಎಂದು ಪರೀಕ್ಷಿಸುವ ಸಲುವಾಗಿ, ಮರದ ಮೇಲೆ ಕುಳಿತಿದ್ದ ಮುದಿಗೂಬೆಯನ್ನು ತನ್ನ ಪರಿಚಯವಿದೆಯೇ ಎಂದು ಕೇಳಿದನು. ಆಗ ಗೂಬೆಯು ಬಹಳ ವರ್ಷಗಳಿಂದ ತಾನು ಇಲ್ಲೇ ಇದ್ದರೂ ನಾನು ನಿನ್ನ ಹೆಸರನ್ನು ಕೇಳಿದವನಲ್ಲ ಎಂದಿತು. ಮುಂದುವರಿದು ಸರೋವರದ ಬಳಿಯಿರುವ ಬಕಪಕ್ಷಿ, ಅದಕ್ಕಿಂತಲೂ ವಯಸ್ಸಾದ ಆಮೆಯನ್ನು ತನ್ನ ಪರಿಚಯದ ಬಗ್ಗೆ ರಾಜ ಕೇಳಿದನು. ಆಗ ಆಮೆಯು ನಾನು ಶತ ಶತಮಾನಗಳಿಂದ ವಾಸಿಸುತ್ತಿರುವ ಈ ಸರೋವರನ್ನು ಕಟ್ಟಿಸಿದ ನಿನ್ನ ಪರಿಚಯ ಇರದೇ ಇರಲು ಸಾಧ್ಯವೇ? ನಿನ್ನ ಒಳ್ಳೆ ಕೆಲಸದಿಂದ ನಾವಿಷ್ಟು ಮಂದಿ ಇಷ್ಟು ಸುಖವಾಗಿದ್ದೇವೆ ಎಂದು ಉಪಕಾರ ಸ್ಮರಣೆ ಮಾಡುತ್ತದೆ. ಆಮೆಯ ಮಾತು ಮುಗಿಯುತ್ತಿರುವಷ್ಟರಲ್ಲೇ ದೇವದೂತರಿಬ್ಬರು ವಿಮಾನದಿಂದ ಇಳಿದು ರಾಜನ್, ನಿನ್ನ ಪುಣ್ಯದ ಲೆಕ್ಕಾಚಾರದಲ್ಲಿ ನಮ್ಮದು ತಪ್ಪಾಗಿದೆ. ನಿನ್ನ ಪುಣ್ಯಕ್ಷಯಿಸಿಲ್ಲ.. ನಮ್ಮ ಜೊತೆ ಮತ್ತೆ ಸ್ವರ್ಗಕ್ಕೆ ಬಾ ಎಂದು ಕರೆದುಕೊಂಡು ಹೋದರು.

**ನೀತಿ : ನಾವು ಮಾಡಿದ ಒಳ್ಳೆ ಕೆಲಸ ಯಾವಾಗಲೂ ನಮ್ಮನ್ನು ಕಾಪಾಡುತ್ತದೆ.**

# ಬಳಗದಿಂದ ತುಳಸೀ ಸಂಕೀರ್ತನೆ



ಕಾರ್ತಿಕ ಮಾಸದ ಮೊದಲ ಹದಿನೈದು ದಿನಗಳು ಎಲ್ಲೆಲ್ಲೂ ತುಳಸಿ ಸಂಕೀರ್ತನೆಯ ಸಂಭ್ರಮ. ಸಂಜೆ ಹೊತ್ತಿನಲ್ಲಿ ತುಳಸಿ ಕಟ್ಟೆಯನ್ನು ದೀಪದಿಂದ ಸಿಂಗರಿಸಿ, ಮನೆಮಂದಿಯೆಲ್ಲಾ ಸೇರಿ ತಮ್ಮ ಶಕ್ತ್ಯಾನುಸಾರ ಸಂಕೀರ್ತನೆ ಮಾಡುತ್ತಾ, ತುಳಸಿಗೆ ಪ್ರದಕ್ಷಿಣೆ ಬರುವುದು ಉಡುಪಿ, ಮಂಗಳೂರು ಪ್ರದೇಶದಲ್ಲಿ ಸಾಮಾನ್ಯ. ಈ ಸಂಪ್ರದಾಯ ಬೆಂಗಳೂರಲ್ಲೂ ಕೆಲವು ಮನೆಗಳಲ್ಲಿ ಈಗಲೂ ನಡೆಯುತ್ತಿರುವುದು ಖುಷಿಯ ವಿಚಾರ. ತುಳಸಿ ಸಂಕೀರ್ತನೆಯ ಸಂಪ್ರದಾಯ, ಅದರ ಹಿಂದಿರುವ ಮಹತ್ವವನ್ನು ಬಳಗದ ಸದಸ್ಯರಿಗೆ ಪರಿಚಯಿಸುವ ಉದ್ದೇಶದಿಂದ ಆನಂದ ಬಳಗದ ಧಾರ್ಮಿಕ ವಿಭಾಗ ಕಳೆದ ಕೆಲವಾರು ವರ್ಷಗಳಿಂದ ದೀಪಾವಳಿ ಸಂದರ್ಭದಲ್ಲಿ ಒಂದು ದಿನ ತುಳಸಿ ಸಂಕೀರ್ತನೆಯನ್ನು ಸಂಯೋಜಿಸುತ್ತಾ ಬಂದಿದೆ.

ಧಾರ್ಮಿಕ ವಿಭಾಗದ ಸಂಚಾಲಕರಾದ ಶ್ರೀ ವೈ. ಜಯಂತರಾವ್ ರವರ ನೇತೃತ್ವದಲ್ಲಿ ಈ ವರ್ಷದ ತುಳಸಿ ಸಂಕೀರ್ತನೆ ದಿ.7.11.2019 ರಂದು ಶ್ರೀ ಪೂರ್ಣ ಪ್ರಜ್ಞ ವಿದ್ಯಾಪೀಠದಲ್ಲಿ ನಡೆಯಿತು. ಅಂದು ಸಂಜೆ ಸುಮಾರು 6 ಗಂಟೆಗೆ ವಿದ್ಯಾಪೀಠದ ಶ್ರೀ ಕೃಷ್ಣ ದೇಗುಲದ ಮುಂಭಾಗದಲ್ಲಿ ಸಾಲಂಕೃತವಾದ ತುಳಸಿ ಕಟ್ಟೆಯಲ್ಲಿ ಪ್ರಾರಂಭಿಕ ಪೂಜಾ ವಿಧಾನಗಳು ನಡೆದವು. ಆ ನಂತರ ಬಳಗದ ಸದಸ್ಯರ ತಂಡ ಶ್ರೀ ಪಿ.ಸಿ. ಮುಕುಂದರಾವ್ ಮತ್ತು ಶ್ರೀ ಮಟ್ಟಿ ರಾಮಚಂದ್ರರಾವ್‌ರವರು ಮಾರ್ಗದರ್ಶನದಲ್ಲಿ ವಾದಿರಾಜ ಸ್ವಾಮಿಗಳು ರಚಿಸಿರುವ ಲಕ್ಷುಮಿ ನಾರಾಯಣ.. ಕಂಡೆ ಕಂಡೆನು ಕೃಷ್ಣ ನಿನ್ನಯ.. ರುಗ್ಮ ಭೂಷಣ ಪಾಲಿಸೆನ್ನನು, ದೇವರ ದೇವನೆ ಕಾಯೋ, ಕೇಳು ಕೇಳಲೆ ಗೋಪಿ ನಿನ್ನಯ, ನೀರೇ ತೋರೆಲೆ, ನೀರೇ ತೋರೆಲೆ ಮೊದಲಾದ ಸಂಕೀರ್ತನೆಗಳಿಗೆ ತಾಳ ಹಾಕುತ್ತಾ ಲಯಬದ್ಧವಾಗಿ ಮಾಡಿರುವ ಸಂಕೀರ್ತನೆ ಅತ್ಯಮೋಘವಾಗಿತ್ತು. ಬಳಗದ ಸದಸ್ಯರ ಜೊತೆಗೆ ವಿದ್ಯಾಪೀಠದ ಕೆಲವು ವಿದ್ಯಾರ್ಥಿಗಳೂ ಸಂಕೀರ್ತನೆಯಲ್ಲಿ ಪಾಲ್ಗೊಂಡರು. ಸುಮಾರು ಒಂದೂವರೆ ಗಂಟೆಗಳ ಕಾಲ ಸರಾಗವಾಗಿ ನಡೆದ ಸಂಕೀರ್ತನೆಯ ನಂತರ ಮಹಾ ಮಂಗಳಾರತಿ ಪುಣ್ಯಕಾಲದಲ್ಲಿ ವಿದ್ಯಾಪೀಠದ ಕಾರ್ಯದರ್ಶಿ ವಿದ್ವಾನ್ ಯು. ಕೇಶವಾಚಾರ್ಯರು ತುಳಸೀ ನಾರಾಯಣನಿಗೆ ಆರತಿ ಬೆಳಗಿಸಿ, ತುಳಸಿ ಸಂಕೀರ್ತನೆಯ ಮಹತ್ವದ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು. ಮಹಾಮಂಗಳಾರತಿ ನಂತರ ಶ್ರೀಕೃಷ್ಣನ ವೈಭವದ ಪಲ್ಲಕ್ಕಿ ಉತ್ಸವ, ಮಹಾಪೂಜೆ ನಂತರ ವಿಶೇಷ ಫಲಾಹಾರದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗಿತ್ತು. ಈ ಅಪರೂಪದ ಧಾರ್ಮಿಕ ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ ಶ್ರೀ ವೈ. ಜಯಂತರಾವ್ ಮತ್ತು ಅವರ ಕಾರ್ಯ ತಂಡಕ್ಕೆ ಅಭಿನಂದನೆ ಸಲ್ಲಬೇಕು. ಸರ್ವ ರೀತಿಯ ಸಹಕಾರ ಮತ್ತು ಮಾರ್ಗದರ್ಶನ ನೀಡಿದ ವಿದ್ವಾನ್ ಯು. ಕೇಶವಾಚಾರ್ಯ ಮತ್ತು ಅವರ ವೃಂದಕ್ಕೆ ಧನ್ಯವಾದ ಅರ್ಪಿಸಲೇಬೇಕು.

---



# ಬಳಗದ ಕ್ಯಾಲೆಂಡರ್ ಬಿಡುಗಡೆ

ಆನಂದ ಬಳಗವು ಯುವ ವಿಭಾಗದ ನೇತೃತ್ವದಲ್ಲಿ ಕಳೆದ ಕೆಲವು ವರ್ಷಗಳಿಂದ ಬಳಗದ ಕ್ಯಾಲೆಂಡರ್‌ನ್ನು ಹೊರತರುತ್ತಿದೆ. 2020ನೇ ವರ್ಷದ ಆನಂದ ಬಳಗದ ಕ್ಯಾಲೆಂಡರನ್ನು ದಿ. 14.12.2019 ರಂದು ಹೋಟೆಲ್ ಅಜಂತಾದಲ್ಲಿ ನಡೆದ ಬಳಗದ ಕಾರ್ಯಕಾರಿ ಸಮಿತಿಯ ಮಾಸಿಕ ಸಭೆಯ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು. ಬಳಗದ ಅಧ್ಯಕ್ಷೆಯಾದ ಶ್ರೀಮತಿ ಗೀತಾ ವಾಸುದೇವರಾವ್ ರವರು ಕ್ಯಾಲೆಂಡರ್‌ನ್ನು ಔಪಚಾರಿಕವಾಗಿ ಬಿಡುಗಡೆ ಮಾಡಿ ಪ್ರಥಮ ಪ್ರತಿಗಳನ್ನು ಬಳಗದ ಉಪಾಧ್ಯಕ್ಷರಾದ ಶ್ರೀ ಬಾ. ರಾಮಚಂದ್ರ ಉಪಾಧ್ಯ, ಶ್ರೀಮತಿ ವಿಜಯಲಕ್ಷ್ಮಿ ಭಟ್, ಹಿಂದಿನ ಅಧ್ಯಕ್ಷರಾದ ಶ್ರೀ ಪಿ.ಎಸ್. ಬಾಗಿಲ್ತಾಯ ಹಾಗೂ ಯುವ ವಿಭಾಗದ ಸಂಚಾಲಕರಾದ ಶ್ರೀ ಎಂ. ಕೃಷ್ಣ ಪ್ರಸಾದ್‌ರವರಿಗೆ ನೀಡಿದರು. ಯುವ ವಿಭಾಗವು ಕ್ಯಾಲೆಂಡರನ್ನು ಸುಂದರವಾಗಿ ವಿನ್ಯಾಸಗೊಳಿಸಿ, ಸಕಾಲದಲ್ಲಿ ಬಿಡುಗಡೆ ಗೊಳಿಸುವಲ್ಲಿ ಪಟ್ಟ ಶ್ರಮವನ್ನು ಶ್ಲಾಘಿಸಿದ ಅಧ್ಯಕ್ಷರು ಈ ಕ್ಯಾಲೆಂಡರ್ ಬಳಗದ ಎಲ್ಲಾ ಸದಸ್ಯರ ಮನೆಯಲ್ಲಿ ಇರುವಂತಾಗಬೇಕೆಂದು ಬಯಸಿದರು.

ಶ್ರೀ ಎಂ. ಕೃಷ್ಣ ಪ್ರಸಾದ್‌ರವರು ಈ ವರ್ಷದ ಕ್ಯಾಲೆಂಡರ್‌ನ ವೈಶಿಷ್ಟ್ಯಗಳನ್ನು ವಿವರಿಸಿದರೆ, ಕ್ಯಾಲೆಂಡರ್ ತಯಾರಿಯ ರೂವಾರಿ ಶ್ರೀ ಎಂ. ದಿನೇಶ್‌ರಾವ್ ಕ್ಯಾಲೆಂಡರ್‌ಗೆ ಜಾಹೀರಾತು ನೀಡಿದವರ ವಿವರವನ್ನು ನೀಡಿ, ಅವರಿಗೆಲ್ಲಾ ಧನ್ಯವಾದ ಅರ್ಪಿಸಿದರು. ಬಿಡುಗಡೆಯ ಸಂದರ್ಭದಲ್ಲಿ ಪಾಲ್ಗೊಂಡಿದ್ದ ಜಾಹೀರಾತುದಾರರಿಗೆ ಕ್ಯಾಲೆಂಡರ್ ಪ್ರತಿಗಳನ್ನು ಕೃತಜ್ಞತಾ ಪೂರ್ವಕವಾಗಿ ನೀಡಲಾಯಿತು. ಈ ಕ್ಯಾಲೆಂಡರ್‌ನ ಪ್ರತಿಗಳನ್ನು ಭೃಗುವಾಣಿಯ ಕಳೆದ ಸಂಚಿಕೆಯಲ್ಲಿ ತಿಳಿಸಿರುವ ವಿಳಾಸಗಳಿಂದ ಅಥವಾ ಆನಂದ ಮಿಲನದಂದು ಎಲ್ಲಾ ಸದಸ್ಯರು ಪಡೆಯಬೇಕೆಂದು ಕೋರಲಾಗಿದೆ.

*With Best Compliments from :*

# ಹೋಟೆಲ್ ಶೀತಲ್

ಆನಂದರಾವ್ ವೃತ್ತ, ಬೆಂಗಳೂರು – 560 009

## HOTEL Sheethal

**#32/12, Sheshadri Road,**
**Ananda Rao Circle,**
**Bangalore - 560 009**
**Ph : 41139560 - 64**
**Mobile : 98457 77381**



## Sheethal Residency

**# 3/1, Old Sawar Lane, Sheshadri Road**
**Near Sangolli Rayanna Circle,**
**Bangalore - 560 009**
**Ph : 080 2234 3777 / 80 / 81**
**email : info@sheetalresidency.com**
**URL : www.sheetalresidency.com**

**ಎ. ಪ್ರಭಾಕರ ರಾವ್** ಮ್ಯಾನೇಜಿಂಗ್ ಪಾರ್ಟ್‌ನರ್

---

ಶುಭಾಶಯಗಳನ್ನು ಕೋರುವವರು



|| ಹರಿಃ ಓಂ ||

# ಉಪಾಧ್ಯ ಮತ್ತು ಕಂಪನಿ



(ಆಯುರ್ವೇದ ಔಷಧಗಳ ಸಗಟು ಮಾರಾಟಗಾರರು)

**ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು – 27, ದೂರವಾಣಿ : 22235533, 22241121**

**ಉಪಾಧ್ಯ ಆಯುರ್ವೇದ ಭಂಡಾರ**

ಮತ್ತಿಕೆರೆ : 15/33, ಮೊದಲನೆಯ ಮುಖ್ಯರಸ್ತೆ
ಬೆಂಗಳೂರು – 560 054
ದೂರವಾಣಿ : 23372422

ಜಯನಗರ : 1333, 26ನೇ ಮುಖ್ಯರಸ್ತೆ,
4ನೇ 'ಟಿ' ಬ್ಲಾಕ್, ಬೆಂಗಳೂರು – 41
ದೂರವಾಣಿ : 26639321

ಶ್ರೀರಾಂಪುರ: 389, ಮಹಾಕವಿ ಕುವೆಂಪು ರಸ್ತೆ,
ನಾಗಪ್ಪ ಬ್ಲಾಕ್, ಬೆಂಗಳೂರು – 21

**ನಮ್ಮ ಎಲ್ಲಾ ಸಂಸ್ಥೆಗಳಲ್ಲಿ ತಜ್ಞ ವೈದ್ಯರುಗಳಿಂದ ಚಿಕಿತ್ಸಾ ಸೌಲಭ್ಯ ದೊರೆಯುತ್ತದೆ.**
**ಸಮಯ ಬೆಳಿಗ್ಗೆ 11.00 ರಿಂದ 3.00 ಮತ್ತು ಸಂಜೆ 7.00 ರಿಂದ 8.30 ರವರೆಗೆ**
**(ಆನಂದ ಬಳಗದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಸೇವೆ ಲಭ್ಯ)**

## ಜನವರಿ – ಏಪ್ರಿಲ್ 2020 ರ ಅವಧಿಯ ವಿಶೇಷ ದಿನಗಳು

| | | |
|---|---|---|
| ಜನವರಿ 06, ಸೋಮವಾರ | – | ಸರ್ವೈಕಾದಶೀ |
| ಜನವರಿ 10, ಶುಕ್ರವಾರ | – | ಹುಣ್ಣಿಮೆ |
| ಜನವರಿ 12, ಭಾನುವಾರ | – | ಆನಂದ ಮಿಲನ 2020 |
| ಜನವರಿ 14, ಮಂಗಳವಾರ | – | ಮಕರ ಸಂಕ್ರಮಣ |
| ಜನವರಿ 18, ಶನಿವಾರ | – | ಉಡುಪಿ ಅದಮಾರು ಸ್ವಾಮೀಜಿಯವರ ಪರ್ಯಾಯ ಆರಂಭ |
| ಜನವರಿ 19, ಭಾನುವಾರ | – | ಕ್ರೀಡಾಮಿಲನ 2020 |
| ಜನವರಿ 20, ಸೋಮವಾರ | – | ಸರ್ವೈಕಾದಶೀ |
| ಜನವರಿ 24, ಶುಕ್ರವಾರ | – | ಅಮಾವಾಸ್ಯೆ |
| ಜನವರಿ 25, ಶನಿವಾರ | – | ಶಿಶಿರ ಋತು, ಮಾಘ ಮಾಸಾರಂಭ |
| ಜನವರಿ 26, ಭಾನುವಾರ | – | ಗಣರಾಜ್ಯೋತ್ಸವ |
| ಫೆಬ್ರವರಿ 01, ಶನಿವಾರ | – | ರಥಸಪ್ತಮಿ |
| ಫೆಬ್ರವರಿ 02, ಭಾನುವಾರ | – | ಭೀಷ್ಮಾಷ್ಟಮಿ |
| ಫೆಬ್ರವರಿ 03, ಸೋಮವಾರ | – | ಮಧ್ವನವಮಿ |
| ಫೆಬ್ರವರಿ 05, ಬುಧವಾರ | – | ಸರ್ವೈಕಾದಶೀ |
| ಫೆಬ್ರವರಿ 09, ಭಾನುವಾರ | – | ಹುಣ್ಣಿಮೆ |
| ಫೆಬ್ರವರಿ 13, ಗುರುವಾರ | – | ಕುಂಭ ಸಂಕ್ರಮಣ |
| ಫೆಬ್ರವರಿ 19, ಬುಧವಾರ | – | ಸರ್ವೈಕಾದಶೀ |
| ಫೆಬ್ರವರಿ 21, ಶುಕ್ರವಾರ | – | ಮಹಾಶಿವರಾತ್ರಿ |
| ಫೆಬ್ರವರಿ 23, ಭಾನುವಾರ | – | ಅಮಾವಾಸ್ಯೆ |
| ಫೆಬ್ರವರಿ 24, ಸೋಮವಾರ | – | ಫಾಲ್ಗುಣ ಮಾಸಾರಂಭ |
| ಮಾರ್ಚ್ 06, ಶುಕ್ರವಾರ | – | ಸರ್ವೈಕಾದಶೀ |
| ಮಾರ್ಚ್ 09, ಸೋಮವಾರ | – | ಹುಣ್ಣಿಮೆ |
| ಮಾರ್ಚ್ 14, ಶನಿವಾರ | – | ಮೀನ ಸಂಕ್ರಮಣ |
| ಮಾರ್ಚ್ 20, ಶುಕ್ರವಾರ | – | ವೈಷ್ಣವೈಕಾದಶೀ |
| ಮಾರ್ಚ್ 24, ಮಂಗಳವಾರ | – | ಅಮಾವಾಸ್ಯೆ |
| ಮಾರ್ಚ್ 25, ಬುಧವಾರ | – | ಚಾಂದ್ರಯುಗಾದಿ ಚೈತ್ರಮಾಸ, ವಸಂತ ಋತು ಆರಂಭ |
| ಏಪ್ರಿಲ್ 02, ಗುರುವಾರ | – | ಶ್ರೀರಾಮ ನವಮಿ |
| ಏಪ್ರಿಲ್ 04, ಶನಿವಾರ | – | ಸರ್ವೈಕಾದಶೀ |
| ಏಪ್ರಿಲ್ 08, ಬುಧವಾರ | – | ಹುಣ್ಣಿಮೆ |
| ಏಪ್ರಿಲ್ 13, ಸೋಮವಾರ | – | ಮೇಷ ಸಂಕ್ರಮಣ |
| ಏಪ್ರಿಲ್ 14, ಮಂಗಳವಾರ | – | ಸೌರಯುಗಾದಿ(ವಿಷು) ಶಾರ್ವರಿ ಸಂವತ್ಸರದ ಆರಂಭ |
| ಏಪ್ರಿಲ್ 18, ಶನಿವಾರ | – | ಸರ್ವೈಕಾದಶೀ |
| ಏಪ್ರಿಲ್ 23, ಗುರುವಾರ | – | ಅಮಾವಾಸ್ಯೆ |

**(ಆಧಾರ : ಪರ್ಯಾಯ ಶ್ರೀ ಪೂರ್ಣಪ್ರಜ್ಞ ಪಂಚಾಗಂ)**

## ಕವನ

ಕಚಗುಳಿ ಇಡುವ ಅಲೆಯು
ಮೂಡಿದ ಹೆಜ್ಜೆಯ ಗುರುತನು
ಅಳಿಸಿ ಮುತ್ತಿಟ್ಟು ಸರಿದಿದೆ
ಮತ್ತೆ ಮತ್ತೆ ಪ್ರೀತಿಸಲೆಂದು

ಭರವಸೆಯ ಬೆಳಕು
ಕವಿ ನೆನಪನು ಅಳಿಸಿ
ಮರು ಪ್ರಯತ್ನಿಸಲೆಂದೇ
ಮತ್ತೆ ಮತ್ತೆ ಪ್ರಸರಿಸಿದೆ.

ಆರ್ಭಟಿಸಿ ಬೊಬ್ಬಿಟ್ಟರೂ
ಮೇಲೆದ್ದು ಅಪ್ಪಳಿಸಿದರೂ
ಆಳದ ಗೊಂದಲದ ಅಳಿಸಿ ತಣಿಸಿ ಮಣಿಸಿ
ಮತ್ತೆ ಮತ್ತೆ ಮಂಥಿಸಿದೆ

ಸಂಜೆಯ ಸೂರ್ಯನು ವಿದಾಯ ಹೇಳುತ
ದಿವ್ಯ ಮೌನಕೆ ಮತ್ತೆ ಮೆತ್ತಗೆ ಜಾರಿದೆ
ಮತ್ತೆ ಬರುವ ನಾಳೆಗೆಂದೇ

**– ಹಂಸ ಭಟ್ಟ**



# ಯಶಸ್ವೀ ಬ್ಯಾಡ್‌ಮಿಂಟನ್ ಲೀಗ್ – 2019




ಆನಂದ ಬಳಗದ ಯುವ ವಿಭಾಗವು ಈ ಹಿಂದೆ ನಡೆಸಿದ ಆನಂದ ಬಳಗ ಬ್ಯಾಡ್‌ಮಿಂಟನ್ ಲೀಗ್ – 2017ರ ಯಶಸ್ಸಿನಿಂದ ಪ್ರೇರಣೆಗೊಂಡು ಎ.ಬಿ.ಎಲ್.ನ ಎರಡನೇ ಆವೃತ್ತಿಯನ್ನು ದಿ. 17.11.2019 ರಂದು ಸಂಯೋಜಿಸಿತ್ತು. ನಗರದ ಕಬ್ಬನ್‌ಪಾರ್ಕ್‌ನಲ್ಲಿರುವ ಕೆ.ಜಿ.ಎಸ್. ಕ್ಲಬ್‌ನ ಅತ್ಯಂತ ಸುಸಜ್ಜಿತ ಬ್ಯಾಡ್‌ಮಿಂಟನ್ ಕೋರ್ಟ್‌ನಲ್ಲಿ ನಡೆದ ಎಬಿಎಲ್–2019 ಅಂದು ಬೆಳಿಗ್ಗೆ ಬಳಗದ ಹಿಂದಿನ ಅಧ್ಯಕ್ಷರಾದ ಹಾಗೂ ಕ್ರೀಡಾ ಚಟುವಟಿಕೆಗಳಿಗೆ ಉದಾರವಾದ ಉತ್ತೇಜನ ನೀಡುತ್ತಿರುವ ಶ್ರೀ ಪಿ.ಎಸ್. ಬಾಗಿಲ್ತಾಯರಿಂದ ಉದ್ಘಾಟನೆಯಾಯಿತು. ಆನಂತರ ದಿನಪೂರ್ತಿ ನಡೆದ ಬ್ಯಾಡ್ಮಿಂಟನ್ ಆಟದಲ್ಲಿ ಮಹಿಳೆಯರ ಸಿಂಗಲ್ಸ್ ಮತ್ತು ಡಬ್ಬಲ್ಸ್, ಪುರುಷರ ಸಿಂಗಲ್ಸ್ ಮತ್ತು ಡಬ್ಬಲ್ಸ್ ಪಂದ್ಯಾಟಗಳನ್ನು ಏರ್ಪಡಿಸಲಾಗಿತ್ತು. ಪುರುಷರಿಗೆ 35 ವರ್ಷದ ಒಳಗಿನ ಹಾಗೂ 35 ವರ್ಷ ಮೇಲ್ಪಟ್ಟ ಆಟಗಾರರಿಗೆ ಪ್ರತ್ಯೇಕ ಪಂದ್ಯಗಳನ್ನು ಸಂಯೋಜಿಸಲಾಗಿತ್ತು. ಪಂದ್ಯದಲ್ಲಿ ವಿಜೇತರಿಗೆ ಶ್ರೀ ಪಿ.ಎಸ್. ಬಾಗಿಲ್ತಾಯ, ಹೋಟೆಲ್ ಉದ್ಯಮಿ ಹಾಗೂ ಪರಿಣತ ಬ್ಯಾಡ್ಮಿಂಟನ್ ಆಟಗಾರರಾದ ಶ್ರೀ ಶ್ರೀನಿವಾಸರಾವ್, ಬಳಗದ ಮಾಜಿ ಅಧ್ಯಕ್ಷರಾದ ಶ್ರೀ ಯು. ಅನಂತಪದ್ಮನಾಭ ಬಲ್ಲಾಳ್ ಹಾಗೂ ಬಳಗದ ಕಾರ್ಯದರ್ಶಿ ಶ್ರೀ ಎಸ್. ಹರಿದಾಸ್ ಉಪಾಧ್ಯರವರು ಬಹುಮಾನಗಳನ್ನು ನೀಡಿ ಅಭಿನಂದಿಸಿದರು. ಕೆ.ಜಿ.ಎಸ್. ಕ್ಲಬ್‌ನ ಬ್ಯಾಡ್ಮಿಂಟನ್ ಕೋರ್ಟ್‌ನ ವೆಚ್ಚವನ್ನು ಪ್ರಾಯೋಜಿಸಿದ ಶ್ರೀ ಶ್ರೀನಿವಾಸರಾವ್ ಹಾಗೂ ಎಬಿಎಲ್‌ನ ಯಶಸ್ಸಿಗಾಗಿ ಶ್ರಮಿಸಿದ ಶ್ರೀ ಬಾಲಚಂದ್ರ ತೋಳ್ಪಾಡಿ, ಶ್ರೀ ಸಂದೀಪ್‌ರಾವ್, ಶ್ರೀ ಎಂ. ದಿನೇಶ್‌ರಾವ್ ಮತ್ತು ಯುವ ವಿಭಾಗದ ಸಂಚಾಲಕರಾದ ಶ್ರೀ ಎಂ.ಕೆ. ಪ್ರಸಾದ್ ಮತ್ತು ಅವರ ತಂಡಕ್ಕೆ ಮಾತ್ರವಲ್ಲ ಅತ್ಯಂತ ಉತ್ಸಾಹದಿಂದ ಆಟದಲ್ಲಿ ಪಾಲ್ಗೊಂಡ ಸುಮಾರು 75 ಸದಸ್ಯ ಕ್ರೀಡಾಳುಗಳಿಗೆ ಅಭಿನಂದನೆಗಳು. ಕ್ರೀಡಾ ಕೂಟದ ದಿನ ಬೆಳಗ್ಗಿನ ಉಪಾಹಾರ, ಮಧ್ಯಾಹ್ನದ ಊಟ ಹಾಗೂ ಸಂಜೆಯ ಉಪಾಹಾರದ ವ್ಯವಸ್ಥೆಯೂ ಸೇರಿದಂತೆ ಎಲ್ಲಾ ತಯಾರಿಗಳನ್ನು ಅಚ್ಚುಕಟ್ಟಾಗಿ ಮಾಡಿದ ಯುವ ವಿಭಾಗಕ್ಕೆ ಶ್ಲಾಘನೆಗಳು.

## ಎ.ಬಿ.ಎಲ್. 2019 – ಬಹುಮಾನ ವಿಜೇತರು

| ಪಂದ್ಯ | ವಿನ್ನರ್ಸ್ | ರನ್ನರ್ಸ್ |
|---|---|---|
| 1. ಮಹಿಳೆಯರ ಸಿಂಗಲ್ಸ್ | ಅಖಿಲಾ ಆನಂದ್ | ಅರ್ಚನರಾವ್ |
| 2. ಮಹಿಳೆಯರ ಡಬ್ಬಲ್ಸ್ | ಲಕ್ಷ್ಮೀದಾಸ್ ಮತ್ತು ಅಶ್ವಿನಿ ಆರ್ | ಅಖಿಲಾ ಆನಂದ್ ಮತ್ತು ಅಲಕಾ ಅರುಣ್ |
| 3. ಪುರುಷರ ಸಿಂಗಲ್ಸ್ (35 ವರ್ಷದವರೆಗೆ) | ಶ್ರೀವರ | ವಾದಿರಾಜ ಕೆ.ಆರ್. |
| 4. ಪುರುಷರ ಡಬ್ಬಲ್ಸ್ (35 ವರ್ಷದವರೆಗೆ) | ನಿಶ್ಚಲ್ ತೋಳ್ಪಾಡಿ ಮತ್ತು ವಾದಿರಾಜ ಕೆ.ಆರ್ | ಶಶಾಂಕ್ ಹೆಚ್.ಎಸ್ ಮತ್ತು ಶ್ರವಣ್ ಉಡುಪ |
| 5. ಪುರುಷರ ಸಿಂಗಲ್ಸ್ (35 ವರ್ಷ ಮೇಲ್ಪಟ್ಟು) | ದೇವಿಪ್ರಸಾದ್ | ರಾಘವೇಂದ್ರ ರಾವ್ ಕೆ.ಎಸ್. |
| 6. ಪುರುಷರ ಡಬ್ಬಲ್ಸ್ (35 ವರ್ಷ ಮೇಲ್ಪಟ್ಟು) | ಪ್ರಶಾಂತ್ ಕಲ್ಲೂರಾಯ ಮತ್ತು ಪದ್ಮನಾಭ ಹೆಬ್ಬಾರ್ | ಪ್ರಕಾಶ್‌ರಾವ್ ಮತ್ತು ಶ್ರೀಪತಿ ಆಚಾರ್ಯ |

• ವಿಜೇತರಿಗೆಲ್ಲಾ ಅಭಿನಂದನೆ •


# ಬಳಗದ ಅವಿಸ್ಮರಣೀಯ ಪ್ರವಾಸ

ಅಂದು ಬೆಳಿಗ್ಗೆ 6.30ಕ್ಕೆ ಸರಿಯಾಗಿ ಅಂದುಕೊಂಡಂತೆ ನಾವೆಲ್ಲರೂ ವುಡ್‌ಲ್ಯಾಂಡ್ಸ್ ಹೋಟೆಲ್‌ನ ಹತ್ತಿರ ಸೇರಿದ್ದೆವು. ಚುಮು ಚುಮು ಚಳಿಯಲ್ಲಿ ಎಲ್ಲರಿಗೂ ಕಾಫಿಯೊಂದಿಗೆ ಸ್ವಾಗತವನ್ನು ಬಯಸಿ, ನಮ್ಮ ಆನಂದ ಬಳಗದ ಸಾಂಸ್ಕೃತಿಕ ವಿಭಾಗದ ಸಂಚಾಲಕರಾದ ಶ್ರೀ ರಮೇಶ್‌ಭಟ್ ರವರ ನಾಯಕತ್ವದಲ್ಲಿ ಪ್ರವಾಸ ಕೈಗೊಂಡಿದ್ದೆವು. ಸುಮಾರು 63 ಜನ ಪ್ರವಾಸ ಕೈಗೊಂಡಿದ್ದರಿಂದ ಒಂದು ಬಸ್ಸು ಮತ್ತು ಟಿ.ಟಿ. ಯೊಂದಿಗೆ ನಮ್ಮ ಪ್ರವಾಸ ಮೊದಲಿಗೆ ಭೋಗನಂದೀಶ್ವರ ದೇವಸ್ಥಾನಕ್ಕೆ ಹೊರಟ್ಟಿದ್ದೆವು. ಎಲ್ಲರೂ



ಅವರವರು ಅನುಕೂಲ ಕಂಡ ಸ್ಥಳದಲ್ಲಿ ಬಹಳ ಖುಷಿಯಿಂದ ಆಸೀನರಾಗಿದ್ದರು. ಕೆಲವರಿಗೆ ಬಸ್ಸಿನಲ್ಲಿ ಬರಬೇಕೆಂದು ಅಲ್ಲಿ ಬಹಳಷ್ಟು ಕಾರ್ಯಕ್ರಮ, ವಿನೋದ, ಹಾಸ್ಯ ವಿಡಂಬನೆ ಇರುತ್ತದೆಂದು ಒಂದು ಸಣ್ಣದಾದ ಆಸೆ. ಹಾಗೆ ಅದು ಇತ್ತು ಕೂಡ. ಗಣೇಶನ ಸ್ತುತಿಯೊಂದಿಗೆ ಹೊರಟ ನಾವು ಸರಿಯಾಗಿ 9 ಗಂಟೆಗೆ ಭೋಗನಂದೀಶ್ವರ ದೇವಸ್ಥಾನ ತಲುಪಿದೆವು. ದೇವಸ್ಥಾನ ನೋಡುವ ಮುನ್ನ ಎಲ್ಲರಿಗೂ ಹಸಿವೆಯಾದ್ದರಿಂದ ಮೊದಲಿಗೆ ಹೊಟ್ಟೆಪಾಡು ಮುಗಿಸೋಣವೆಂದು ಬೆಳಗಿನ ಉಪಾಹಾರ ಐತಾಳರ ಕೈ ರುಚಿಯಿಂದ ಇಡ್ಲಿ ಸಾಂಬಾರ್, ಕೇಸರಿಬಾತ್, ಪೊಂಗಲ್ ಕಾಫಿ ಮನಸೋ ಇಚ್ಛೆಯಂತೆ ಪೂರೈಸಿದೆವು.

ಭೋಗ ನಂದೀಶ್ವರ ದೇವಸ್ಥಾನ ಸುಮಾರು 1300 ವರ್ಷದಷ್ಟು ಹಳೆಯದು. ನಂದಿ ಬೆಟ್ಟದ ತಪ್ಪಲಿನಲ್ಲಿ



ಚಿಕ್ಕಬಳ್ಳಾಪುರ ದಲ್ಲಿರುವ ಈ ದೇವಾಲಯವು ಕಲೆ, ಸಂಸ್ಕೃತಿಯ ಬೀಡಾಗಿದೆ. ದೇವಾಲಯದೊಳಗೆ ಕಾಲಿಟ್ಟಂತೆ ನಮಗೆ ಭಕ್ತಿಯ ಪರಾಕಾಷ್ಠೆ ತಲುಪುವುದರಲ್ಲಿ ಸಂಶಯವಿಲ್ಲ. ವಿಶಾಲವಾದ ಕಲ್ಲಿನಲಿ ಕಸೂತಿ ಕೆಲಸ ವಾಸ್ತುಶಿಲ್ಪ ದಿಂದ ಕೂಡಿದ ಈ ದೇವಾಲಯವು ಮನೋಹರವಾಗಿದೆ.

ದೇವಸ್ಥಾನ ತಲುಪುವ ಮುನ್ನ ಎಲ್ಲರೂ ತಮ್ಮ ತಮ್ಮ ಪರಿಚಯವನ್ನು ಮಾಡಿಕೊಳ್ಳುವ ಕಾರ್ಯಕ್ರಮ. ತಮ್ಮ ಕುಟುಂಬ, ವೃತ್ತಿ, ಹವ್ಯಾಸ ಹೇಳುತ್ತಿದ್ದರು. ನಾವು ಮೊದಲನೆ ಸಲ ಬಂದಿದ್ದರಿಂದ ಹೊಸ ಅನುಭವ ಮತ್ತು ಎಲ್ಲರ ಜೊತೆ ಗುರುತಿಸಿಕೊಳ್ಳುವ ಒಳ್ಳೆಯ ಅವಕಾಶ ಸಿಕ್ಕಂತಾಯಿತು. ನಮ್ಮಲಿ ಅಡುಗಿರುವ ಪ್ರತಿಭೆಯನ್ನು ಹೊರತೆಗೆಯಲು ಆನಂದ ಬಳಗ ಒಳ್ಳೆಯ ಅವಕಾಶ ಮಾಡಿಕೊಡುತ್ತದೆ ಹಾಗೂ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗಿಯಾಗಲು ಉತ್ತೇಜನ ಕೊಟ್ಟು ನಮ್ಮನ್ನು ಮುಖ್ಯ ವಾಹಿನಿಗೆ ತರುವ ಗುರುತರ ಜವಾಬ್ದಾರಿಯನ್ನು ಕೂಡ ತೆಗೆದುಕೊಳ್ಳುತ್ತಾರೆ ಎಂದು ಕೇಳಿ ತುಂಬಾ ಮೆಚ್ಚುಗೆಯಾಯಿತು.



ಭೋಗ ನಂದೀಶ್ವರ ದೇವಾಲಯದಿಂದ ನಮ್ಮ ಮುಂದಿನ ಪ್ರಯಾಣ ಮುದ್ದೇನಹಳ್ಳಿಯಲ್ಲಿರುವ ಸರ್.ಎಂ.

ಆನಂದ ಬಳಗದ ಪ್ರವಾಸ ಆನಂದಮಯ ಮತ್ತು ಮನಸ್ಸಿಗೆ ಮುದ ತಂದುಕೊಟ್ಟಿದೆ. ಇದು ನಮ್ಮ ಮೊದಲನೆ ಪ್ರವಾಸ ಇಷ್ಟು ಸಮಯ ಆನಂದ ಬಳಗದ ಜೊತೆ ಪ್ರವಾಸ ಹೋಗದೆ ಇದ್ದುದೆ ನಮಗೆ ಪಶ್ಚಾತ್ತಾಪ. ಪ್ರತಿ ವರ್ಷವೂ ಪ್ರವಾಸಕ್ಕೆ ನಾನೇ ಮೊದಲ ನೋಂದಣಿ ಮಾಡುತ್ತೇನೆ.

*** ಮುರಳಿ ಬೈಲ್**

ವಿಶ್ವೇಶ್ವರಯ್ಯರವರ ಸಮಾಧಿ ಮತ್ತು ಮನೆ, ಅವರಿಗೆ ಬಂದ ಪ್ರಶಸ್ತಿ, ಬಿರುದು ಮೇಲಾಗಿ ಭಾರತರತ್ನವನ್ನು ನೋಡಲು ಮುದ್ದೇನಹಳ್ಳಿಗೆ ತಲುಪಿದೆವು.

ಸುತ್ತಲೂ ಹಸಿರು ವನರಾಶಿ ನಡುವೆ ಅಲ್ಲಿಲ್ಲಿ ತೋಟ, ಹೊಲಗದ್ದೆಗಳ ನಡುವೆ ಬಳಕುತ್ತಾ ಸಾಗುವ ನಮ್ಮ ಪ್ರಯಾಣ ಬದುಕಿನ ಜಂಜಾಟದಿಂದ ಬಲು ದೂರ ಸ್ವಲ್ಪ ಕಾಲವಾದರೂ ನಮ್ಮನ್ನು ನಾವು ಮರೆಯುವುದಕ್ಕೆ ಪ್ರವಾಸ. ಜಡ್ಡು ಹಿಡಿದ ದೇಹಕ್ಕೆ ಮನಸ್ಸಿಗೆ ಒಳ್ಳೆಯ ಟಾನಿಕ್ ಕೊಟ್ಟಂತೆ. ಇಕ್ಕೆಲಗಳಲ್ಲಿ ತರಕಾರಿ, ಸೊಪ್ಪು, ಅವರೆ, ಚೆಂಡುಹೂ, ಸೇವಂತಿಗೆ, ಕಬ್ಬು, ಸಾಲುಮರಗಳೆಲ್ಲಾ ಸೇರಿಕೊಂಡು ಬೆಳ್ಳಂಬೆಳಗ್ಗೆ ಸ್ವಾಗತಿಸಿದ್ದು ನಮ್ಮ ಅದೃಷ್ಟವೋ ಎಂಬಂತಿತ್ತು.

ಮುದ್ದೇನಹಳ್ಳಿಗೆ ಬರುವಾಗ ಸುಮಾರು 11.00 ಗಂಟೆಯಾಗಿತ್ತು. ಸರ್.ಎಂ. ವಿಶ್ವೇಶ್ವರರ ಸಮಾಧಿಗೆ ನಮಿಸಿ ಅವರ ಸಾಧನೆ, ಬಂದ ಪ್ರಶಸ್ತಿ, ಬಿರುದು ಅವರು ಇದ್ದ ಮನೆ, ಉಪಯೋಗಿಸಿದ ಹಾಸಿಗೆ, ಫ್ಯಾನ್, ರೇಡಿಯೋ ಇತರೆ ವಸ್ತುಗಳನ್ನೆಲ್ಲಾ ವಸ್ತು ಸಂಗ್ರಹಾಲದಲ್ಲಿ ಜೋಪಾನ ವಾಗಿಟ್ಟಿದ್ದರು. ನಮಗೆ ಇಲ್ಲಿ ಅತ್ಯಾಕರ್ಷಕವಾಗಿ ಕಂಡದ್ದು ಅವರು ದೀಪದ ಕೆಳಗೆ ಓದಿದ ದೀಪದಸ್ತಂಭ. ಆಗಿನ್ನು ವಿದ್ಯುದೀಪದ ಕಂಬ ಇರದಿದ್ದ ಕಾಲದಲ್ಲಿ ಎಣ್ಣೆ ದೀಪದ ಕೆಳಗೆ ಕುಳಿತು ಅವರು ಓದುತ್ತಿದ್ದರು ಅಂದರೆ ಎಂಥಾ ದೃಢಸಂಕಲ್ಪಕ್ಕೆ ಒಂದು ನಿದರ್ಶನ. ಅವರ ಅಭೂತಪೂರ್ವ ಸಾಧನೆಗಳ ಪಟ್ಟಿಯನ್ನು ನೋಡಿ ಮೂಕವಿಸ್ಮಿತರಾದೆವು.

> ಸಾಂಸ್ಕೃತಿಕ ವಿಭಾಗ ಈ ವರ್ಷ ಏರ್ಪಡಿಸಿದ್ದ ಮುದ ನೀಡಿದ ಮುದ್ದೇನಹಳ್ಳಿ ಪ್ರವಾಸದ ಸವಿನೆನಪುಗಳು ಇನ್ನೂ ನಮ್ಮೆಲ್ಲರ ಮನದಲ್ಲಿ ಹಸಿರಾಗಿಯೇ ಇದೆ.
>
> * ಲಕ್ಷ್ಮೀ ಪುಂಡರೀಕಾಕ್ಷ

ಮುಂದಿನ ಪ್ರಯಾಣ ರಂಗಸ್ಥಳ ದೇವಸ್ಥಾನ. ಇದೂ ಕೂಡ ಚಿಕ್ಕಬಳ್ಳಾಪುರದ ತಿಪ್ಪೇನಹಳ್ಳಿಯಲ್ಲಿದೆ. ಪುರಾತನ ದೇವಸ್ಥಾನವಾದ ಇದು ವಿಜಯನಗರ ಅರಸರ ಕಾಲದ್ದು. ವಿಭೀಷಣನು ಸ್ಥಾಪಿಸಿದ ಈ ದೇವಸ್ಥಾನದಲ್ಲಿ ರಂಗನಾಥ ಸ್ವಾಮಿಯನ್ನು ಸಾಲಿಗ್ರಾಮ ಕಲ್ಲಿನಿಂದ ಪ್ರತಿಷ್ಠಾಪಿಸಿದ್ದಾರೆ. ಇಲ್ಲಿನ ವಿಶೇಷತೆ ಎಂದರೆ ಮಕರ ಸಂಕ್ರಾಂತಿಯಂದು ಸೂರ್ಯನ ಕಿರಣ ಸ್ವಾಮಿಯ ಪಾದದ ಮೇಲೆ ಬೀಳುತ್ತದೆ. ಎಂದರೆ ಎಂಥಾ ಸೋಜಿಗ? ಶೇಷಶಯನ ದಲ್ಲಿರುವ ಈ ದೇವರು ನೋಡಲು ಅದ್ಭುತವಾಗಿದೆ.

> ಆನಂದ ಬಳಗವು ಪ್ರವಾಸವು ಒಂದು ಸುಮಧುರ ಅನುಭವ ಈ ಪ್ರವಾಸ ನಮಗೆ ಐತಿಹಾಸಿಕ ಸ್ಥಳದ ಪರಿಚಯದ ಜೊತೆಗೆ ಮರೆಯಲಾಗದ ಅನುಭವ ನೀಡಿದೆ.
>
> * ಮಂಜು ಕಿಶೋರ್

ಅಲ್ಲಿಂದ ನೇರವಾಗಿ ನಾವು ಕೈಲಾಸಗಿರಿಗೆ ಸುಮಾರು ಒಂದು ಗಂಟೆಗೆ ಹೋದೆವು. ಕೈಲಾಸಗಿರಿಯ ಅತ್ಯಾಕರ್ಷಕ ಸ್ಥಳದಲ್ಲಿ ಮೊದಲನೆಯದು ಎಂದರೆ ತಪ್ಪಾಗಲಾರದು. ಒಂದು ಬೃಹದಾಕಾರದ ಏಕಶಿಲಾ ಕಲ್ಲಿನ ಬೆಟ್ಟವನ್ನು ಕೊರೆದು ಅಲ್ಲಿ ದೇವಸ್ಥಾನವನ್ನು ನಿರ್ಮಿಸಿದ್ದಾರೆ. ಒಳಗೆ ವಿಶಾಲವಾದ ಜಾಗ ಧ್ಯಾನಕ್ಕೆ ಹೇಳಿ ಮಾಡಿಸಿದಂತಿದೆ. ಧ್ಯಾನದಲ್ಲಿನ ಓಂಕಾರನಾದವು ಪ್ರತಿಧ್ವನಿಸಿ ನಮ್ಮನ್ನು ಸುಪ್ತಲೋಕಕ್ಕೆ ಕರೆದೊಯ್ಯಿತು. ದೇವರನ್ನು ವೀಕ್ಷಿಸಿ ಕೆಳಗೆ



ಬಂದಾಗ ಎಲ್ಲರಿಗೂ ಬಿಸಿಬಿಸಿ ಊಟ ತಯಾರಾಗಿತ್ತು. ಟೊಮೊಟೊ ರೈಸ್‌ಬಾತ್, ಮೊಸರನ್ನ, ಪಲ್ಯ, ಹೋಳಿಗೆಯ ಮೃಷ್ಟಾನ್ನ ಭೋಜನ ಸವಿದು ಮತ್ತೆ ಅಲ್ಲಿಂದ ಕೈವಾರ ತಾತಯ್ಯ ಮತ್ತು ಅವರ ಗುರುಗಳ ಸಮಾಧಿಯನ್ನು ನೋಡುವಾಗ ಸಂಜೆಯಾಗಿತ್ತು. ಅಲ್ಲಿಂದ ಹೊರಡುವಾಗ ಮಸುಕು ತುಂಬಿದ ವಾತಾವರಣದಲ್ಲಿ ಎಂದಿನಂತೆ ಪಡುವಣದಲ್ಲಿ ಸೂರ್ಯನು ಕಂತುವಾಗ ನಮಗೆಲ್ಲರಿಗೂ ಬಿಸಿಬಿಸಿ ಕಾಫಿಯೊಂದಿಗೆ ಖಾರ ಸೇವೆಯೂ ನಡೆದಿತ್ತು. ಆ ಒಂದು ದಿನ ಅರ್ಥಪೂರ್ಣವಾಗಿ ಕಳೆದು ಭಾರವಾದ ಮನಸ್ಸಿನಿಂದ ಮತ್ತೆ ಬೆಂಗಳೂರಿಗೆ ಬರುವಾಗ ಎಲ್ಲರಿಗೂ ವಾಂಗೀಬಾತ್ ಬಾಟ್ಲಿಯ ಸೇವೆ (ನೀರು) ರಾತ್ರಿ ಊಟವಾದ ನಂತರ ಎಲ್ಲರನ್ನೂ ಬೀಳ್ಕೊಟ್ಟರು.


– ಹಂದಾಡಿ ಸದಾಶಿವ ಭಟ್

# ಉಡುಪಿ ಕೃಷ್ಣ ಪೊಡವಿಗೊಡೆಯ.....

ಉಡುಪಿಯಲ್ಲಿ ಪಲಿಮಾರು ಮಠಾಧೀಶರಾದ ಪೂಜ್ಯ ವಿದ್ಯಾಧೀಶ ತೀರ್ಥ ಶ್ರೀಪಾದರು ತನ್ನ ಎರಡು ವರ್ಷಗಳ ಪರ್ಯಾಯ ಸೇವೆಯನ್ನು ಶ್ರೀ ಕೃಷ್ಣನಿಗೆ ಸಮರ್ಪಿಸಿ, ಜನವರಿ 18 ರಿಂದ ಅದಮಾರು ಮಠದ ಪರ್ಯಾಯ ಆರಂಭವಾಗಲಿದೆ. ಅದಮಾರು ಕಿರಿಯ ಯತಿಗಳಾದ ಶ್ರೀ ಶ್ರೀ ಈಶಪ್ರಿಯ ತೀರ್ಥ ಸ್ವಾಮೀಜಿಯವರು ಸರ್ವಜ್ಞ ಪೀಠವನ್ನು ಅಲಂಕರಿಸಿ ಮುಂದಿನ ಎರಡು ವರ್ಷ ಕೃಷ್ಣ ಸೇವೆಯ ಕೈಂಕರ್ಯವನ್ನು ನೆರವೇರಿಸಲಿದ್ದಾರೆ. ಉಡುಪಿಯಲ್ಲಿ ನಡೆಯಲಿರುವ ಪರ್ಯಾಯ ಉತ್ಸವದ ಸಂಭ್ರಮದ ಸಂದರ್ಭದಲ್ಲಿ ಶ್ರೀ ರವೀಂದ್ರ ಎಸ್. ದೇಶಮುಖ್ ರವರಿಂದ ಇದೊಂದು ಸಮಯೋಚಿತ ಲೇಖನ.

---

ಕರುಣೆಯ ದೊಡ್ಡ ಕಡಲು ನಮ್ಮ ಕೃಷ್ಣ! ಅವನನ್ನು ಎಷ್ಟು ಹೆಸರುಗಳಿಂದ ಕರೆದರೂ ಹೆಚ್ಚೆಚ್ಚು ಆಪ್ತನೇ. ಶ್ಯಾಮ್, ಮನಮೋಹನ, ಮೋಹನ, ಕಾನ್ಹಾ, ಗೋಪಾಲ, ಮುರಳೀಧರ, ವಿಹಾರೀ, ಮುಕುಂದ, ನಂದನವನ, ಯದುನಂದನ, ಯಶೋದಾನಂದನ, ಗಿರಿಧರ, ಮುರಾರಿ.. ಅಬ್ಬಬ್ಬಾ ಹೇಗೆ ಕರೆದರೂ ಅದು ಕೊಳಲನಾದದಂತೆ ಮನೋಹರವೇ!




ಹಿಡಿ ಅವಲಕ್ಕಿ ನೀಡಿದ ಪ್ರಾಣಸ್ನೇಹಿತ ಸುಧಾಮನಿಗೆ ಕೃಷ್ಣ ಮುಗುಳ್ನಗುತ್ತಲೇ ಅಷ್ಟೈಶ್ವರ್ಯಗಳನ್ನು ನೀಡಿದ. ವಿದುರನಿಗೆ ಕ್ಷಣಮಾತ್ರದಲ್ಲಿ ಸಹಾಯ ಮಾಡಿದ. ಅಧರ್ಮದ ಪರ ನಿಂತ ಕಂಸನನ್ನೇ ಸಂಹರಿಸಿ, ಮಹೋನ್ನತ ಸಂದೇಶ ನೀಡಿದ. ಹಸುಗೂಸು ಆಗಿದ್ದಾಗಲೇ ಪೂತನಿಯನ್ನು ಕೊಂದು, ನಲಿದಾಡಿದ. ಸಾಮಾನ್ಯರಿಗೆ ತೊಂದರೆ ಕೊಡುತ್ತಿದ್ದ ಸರ್ಪವನ್ನು ಮರ್ದಿಸಿ ಅಭಯ ನೀಡಿದ. ಕೊಳಲುನಾದದಿಂದ ಅಮಂಗಳವನ್ನೆಲ್ಲ ದೂರ ಮಾಡಿದ. ಗೋವರ್ಧನಗಿರಿ ಎತ್ತಿ ಗೋಪಿಕೆಯರ ಸಮೇತ ಅಲ್ಲಿನ ಜನರನ್ನು ರಕ್ಷಿಸಿದ. ಸತ್ಯಭಾಮೆಗಾಗಿ ಇಂದ್ರನ ಅಂಗಳದಿಂದ ಪಾರಿಜಾತವನ್ನೇ ತಂದಿಟ್ಟ. ಕುರುಕ್ಷೇತ್ರದಲ್ಲಿ ತೋರಿದ ಲೀಲೆಗಳಂತೂ ಅಸಾಧಾರಣ.

ಹೀಗೆ ಮಥುರೆಯ ಮುದ್ದುಕೃಷ್ಣ ನಮ್ಮ ಮಧ್ವರಿಗೊಲಿದು ಉಡುಪಿಗೆ ಬಂದು ನಿಂತು ಶತಮಾನಗಳೇ ಸಂದಿವೆ. ಉಡುಪಿ ಚೈತನ್ಯದ ಭೂಮಿ. ಅಲ್ಲಿನ ಕಣಕಣದಲ್ಲೂ ಕೃಷ್ಣನಾಮ ಬೆರೆತುಕೊಂಡಿದೆ, ಹಾಗಾಗಿಯೇ ಅಲ್ಲಿ ಒದಗುವ ದಿವ್ಯಾನುಭೂತಿಯೇ ವಿಶಿಷ್ಟ. ಸ್ವತಃ ಆಂಜನೇಯನ ಅವತಾರವಾದ ಮಧ್ವಾಚಾರ್ಯರು ಉಡುಪಿಯಲ್ಲಿ ಸ್ಥಾಪಿಸಿರುವ ಕೃಷ್ಣ ಪ್ರತಿಮೆ ಎಷ್ಟು ನಯನಮನೋಹರ ವೆಂದರೆ ಆ ರೂಪ ಕಂಡು ಬೆರಗಾಗದವರೇ ಇಲ್ಲ. ಎಲ್ಲ ಕಡೆ ಕೃಷ್ಣ ಪೂಜೆ ನಡೆಯುತ್ತದೆ. ಆದರೆ, ಉಡುಪಿಯಲ್ಲಿನ ಕೃಷ್ಣ ಪೂಜೆಗೆ ಅದರದ್ದೇ ಸೊಬಗು ಉಂಟು, ಕ್ರಮ ಉಂಟು! ಅಷ್ಟ ಮಠಗಳ ಮಠಾಧೀಶರೇ ಕ್ರಮವಾಗಿ ಎರಡೆರಡು ವರ್ಷ ಶ್ರೀಕೃಷ್ಣನಿಗೆ ಪೂಜೆ ಸಲ್ಲಿಸುವ ಮಹಾಪರ್ವವೇ 'ಪರ್ಯಾಯ ಕಾಲ' ಎನಿಸಿಕೊಳ್ಳುತ್ತದೆ. ಪರ್ಯಾಯ ಎಂದರೆ ಬರೀ ಕೃಷ್ಣಪೂಜೆ ಮಾಡುವ ಅಧಿಕಾರ ಅಲ್ಲ. ಕೃಷ್ಣನನ್ನು ಹೇಗೆ ಇನ್ನು ಹೆಚ್ಚೆಚ್ಚು ಪ್ರೀತಿಸಬೇಕು. ಇಷ್ಟೆಲ್ಲ ಕರುಣೆ ಹರಿಸುವ ಆ ಕರುಣಾಸಾಗರನಿಗೆ ಏನೆಲ್ಲ ಮಾಡಬಹುದು. ಸಾಮಾನ್ಯ ಜನರ ಹೃದಯಗಳಲ್ಲೂ ಕೃಷ್ಣನನ್ನು, ಕೃಷ್ಣತತ್ವವನ್ನು ಪ್ರತಿಷ್ಠಾಪಿಸುವುದು ಹೇಗೆ ಎಂದೆಲ್ಲ ಯತಿಗಳು ಯೋಚಿಸುತ್ತ ಕೃಷ್ಣಮಯರಾಗಿಯೇ ಎಷ್ಟೆಲ್ಲ ಅದ್ಭುತಗಳನ್ನು ನಿರ್ಮಿಸುತ್ತಿದ್ದಾರೆ. ಅದಕ್ಕೆಂದೇ, ಪರ್ಯಾಯ ಇಡೀ ರಾಷ್ಟ್ರದ ಉತ್ಸವದಂತೆ ದೊಡ್ಡ ಸಂಭ್ರಮವಾಗಿ ಬೆಳೆದು ಬಂದಿದೆ. ಪರ್ಯಾಯಕ್ಕೆ ಒಂದು ವರ್ಷ ಇರುವಾಗಲೇ ನಡೆಯುವ ಬಾಳೆ ಮುಹೂರ್ತ ಬಾಳೆ ಮುಹೂರ್ತದ ಎರಡೇ ತಿಂಗಳ ಬಳಿಕ ನಡೆಯುವ ಅಕ್ಕಿ ಮುಹೂರ್ತ ಪರ್ಯಾಯಕ್ಕೆ ಆರೇಳು ತಿಂಗಳಿರುವಾಗ ನಡೆಯುವ ಕಟ್ಟಿಗೆ ಮುಹೂರ್ತ ಪರ್ಯಾಯಕ್ಕೆ ಏಳೆಂಟು ವಾರಗಳಿರುವಾಗ ನಡೆಯುವ ಭತ್ತ ಮುಹೂರ್ತ ಈ ಕ್ಷೇತ್ರದ ಸೊಗಡನ್ನು ಹೆಚ್ಚಿಸಿವೆ.

ಪರ್ಯಾಯ ಏರಲಿರುವ ಯತಿಗಳು ಆರೇಳು ತಿಂಗಳ ಮುಂಚೆಯೇ ದೇಶಾದ್ಯಂತ ಸಂಚಾರ ಮಾಡಿ, ತೀರ್ಥಕ್ಷೇತ್ರಗಳ ಯಾತ್ರೆ ಮಾಡುತ್ತಾರೆ. ಪರ್ಯಾಯಕ್ಕೆ

ಬರುವಂತೆ ಭಕ್ತಾದಿಗಳಿಗೆ, ಇತರೆ ಮಠಾಧೀಶರಿಗೆ ಆಹ್ವಾನ ನೀಡುತ್ತಾರೆ. ಅಲ್ಲಿಂದ ಬಂದ ಬಳಿಕ ಉಡುಪಿ ಜಿಲ್ಲೆಯ ಪುಣ್ಯಕ್ಷೇತ್ರಗಳನ್ನೂ ಸಂದರ್ಶಿಸುತ್ತಾರೆ. ಪರ್ಯಾಯಕ್ಕೆ ಇನೇನು ಹತ್ತು-ಹದಿನೈದು ದಿನಗಳಿರುವಾಗ ಯತಿಗಳ ಪುರಪ್ರವೇಶವಾಗಿ, ಇಡೀ ಉಡುಪಿ ಸಂಭ್ರಮದಿಂದ ಅವರನ್ನು ಬರಮಾಡಿಕೊಳ್ಳುತ್ತದೆ. ಅಷ್ಟಮಠಗಳು ಈ ಪರಂಪರೆಯನ್ನು ಕಾಪಾಡಿಕೊಂಡು, ಮುನ್ನಡೆಸುತ್ತಿರುವ ಪರಿ ಕೃಷ್ಣಭಕ್ತಿಯ ಅತ್ಯುನ್ನತ ಆದರ್ಶಕ್ಕೆ ಸಾಕ್ಷಿ. ಕೃಷ್ಣಸೇವೆ ಜತೆಗೆ ಜನಸೇವೆಯಲ್ಲೂ ಪರ್ಯಾಯ ಅವಧಿ ಹೊಸ ವಿಕ್ರಮಗಳನ್ನು ದಾಖಲಿಸುತ್ತದೆ. ಮಕ್ಕಳಿಗೆ, ಆರ್ಥಿಕವಾಗಿ ಹಿಂದುಳಿದವರಿಗೆ, ನೊಂದವರಿಗೆ ನೆರವು ನೀಡುವುದು ಕೃಷ್ಣ ಕಾರ್ಯವೆಂದೇ ಭಾವಿಸಿ ಸಾರ್ಥಕವಾಗಿ ಮಾಡಲಾಗುತ್ತಿದೆ. ಇಲ್ಲಿ ಸತತವಾಗಿ ನಡೆಯುವ ಅನ್ನಸಂತರ್ಪಣೆಯಂತೂ ಅಸಂಖ್ಯ ಜೀವಗಳಿಗೆ ನೆಮ್ಮದಿ ಒದಗಿಸಿದೆ. ಹಾಗಾಗಿಯೇ ಉಡುಪಿ ಕೃಷ್ಣನಿಗೆ ಅನ್ನಬ್ರಹ್ಮನೆಂದು ಹೆಸರು.

ಇನ್ನೇನು ಪರ್ಯಾಯ ಅವಧಿ ಪೂರ್ಣಗೊಳಿಸಲಿರುವ ಪಲಿಮಾರು ಮಠಾಧೀಶ ಶ್ರೀ ವಿದ್ಯಾಧೀಶ ತೀರ್ಥ ಸ್ವಾಮೀಜಿ, 2018 ಜನವರಿ 18 ರಿಂದ ಶ್ರೀಕೃಷ್ಣನಿಗೆ ಪ್ರತಿ ನಿತ್ಯ ಲಕ್ಷ ತುಳಸಿ ಅರ್ಪಿಸುವುದನ್ನು ಆರಂಭಿಸಿ ಎರಡು ವರ್ಷಗಳಾಗುತ್ತಿದೆ (ಆ ತುಳಸಿ ಬಳಿಕ ಔಷಧ ತಯಾರಿಕೆಗೆ ಬಳಕೆಯಾಗುತ್ತ ಮನುಷ್ಯನ ದೈಹಿಕ-ಮನೋ ಕಾಯಿಲೆಗಳನ್ನು ದೂರ ಮಾಡುತ್ತಿದೆ.) ಲಕ್ಷನಾಮ ಅರ್ಚನೆ ವಿಷ್ಣುಸಹಸ್ರನಾಮದ ಮೂಲಕ ನಡೆಯುತ್ತಿರುವುದು ವಿಶೇಷ. ಅಲ್ಲದೆ, ಕನಕನ ಕಿಂಡಿ ಬಳಿ 24 ಗಂಟೆ ನಿರಂತರವಾಗಿ ಹರಿನಾಮ ಸ್ಮರಣೆಯು ಭಜನೆ ಮುಖಾಂತರ ನಡೆಯುತ್ತಿರುವುದು ಹೊಸ ದಾಖಲೆಯೇ. ಕೃಷ್ಣ ದೇವಸ್ಥಾನದ ಛಾವಣಿಗೆ ಇವರ ಅವಧಿಯಲ್ಲೇ ಚಿನ್ನದ ಹೊದಿಕೆ ಹೊದಿಸಲಾಗಿದೆ. (ಕೃಷ್ಣನ ದ್ವಾರಕಾನಗರಿ ಸಂಪೂರ್ಣ ಸ್ವರ್ಣಮಯವೇ ಆಗಿತ್ತು ಎಂಬುದನ್ನು ನೆನಪಿಸಿಕೊಳ್ಳಿ). ಜನವರಿ 5 ರಂದು ಶ್ರೀಕೃಷ್ಣನ ಉತ್ಸವ ಮೂರ್ತಿಗೆ ಸ್ವರ್ಣ ತುಲಾಭಾರ ಮಹೋತ್ಸವ 'ತುಂಬ ಜನರಿಗೆ ಜೀವನ ಭಾರ ಎನಿಸುತ್ತಿರುವ ಸಂದರ್ಭದಲ್ಲಿ ಆ ಭಾರವನ್ನೆಲ್ಲ ಜಗದೊಡೆಯ ಕೃಷ್ಣನ ಮೇಲೆ ಹಾಕಿ, ಶರಣಾಗಿ' ಎಂಬ ಸಂದೇಶ. ಇದೇ ಪರ್ಯಾಯ ಅವಧಿಯಲ್ಲಿ ಶ್ರೀ ವಿದ್ಯಾಧೀಶ ತೀರ್ಥರು ಪಲಿಮಾರು ಮಠದ ಉತ್ತರಾಧಿಕಾರಿಯನ್ನೂ ನೇಮಿಸಿದ್ದು, ಹತ್ತೊಂಬತ್ತು ವರ್ಷದ ವಿದ್ಯಾರಾಜೇಶ್ವರ ಸ್ವಾಮೀಜಿ ಅವರಿಗೆ ಗುರುಕಾರುಣ್ಯ, ವಾತ್ಸಲ್ಯದಿಂದ ಮಾರ್ಗದರ್ಶನ ಮಾಡುತ್ತಿದ್ದಾರೆ. ಈ ಭಕ್ತಿ ಮತ್ತದರ ಶಕ್ತಿಯೇ ವಿಶಿಷ್ಟಗಳನ್ನು ಸೃಷ್ಟಿಸುತ್ತಿದೆ ಎಂಬುದು ನಿಜವೇ. ಪೇಜಾವರ ಅಧೋಕ್ಷಜ ಮಠದ ಮಠಾಧೀಶ ಶ್ರೀ ವಿಶ್ವೇಶ ತೀರ್ಥರು ಈ ಬಾರಿಯ ಪರ್ಯಾಯಕ್ಕಿಲ್ಲ ಎಂಬ ಕೊರಗು ದೊಡ್ಡ ಮಟ್ಟದಲ್ಲಿ ಕಾಡುತ್ತಿದೆ. ಆದರೂ. ಹರಿಚಿತ್ತ ಸತ್ಯ ಎಂಬಂತೆ ಕೃಷ್ಣಸೇವೆಗೆ ಮುಂದಡಿ ಇಡುತ್ತ, ಅದಮಾರು ಮಠ ಈ ಬಾರಿಯ ಪರ್ಯಾಯಕ್ಕೆ ಸಿದ್ಧವಾಗಿದೆ. ಅದಮಾರು ಕಿರಿಯ ಯತಿ ಶ್ರೀ ಈಶಪ್ರಿಯ ತೀರ್ಥ ಸ್ವಾಮೀಜಿ ಮುಂದಿನ ಎರಡು ವರ್ಷ ಕೃಷ್ಣಸೇವೆಯ ಕೈಂಕರ್ಯ ನೆರವೇರಿಸಲಿದ್ದಾರೆ. ಸರ್ವಜ್ಞ ಪೀಠ ಅಲಂಕರಿಸಲಿದ್ದಾರೆ.



ಭಕ್ತಿ ಎಂಬುದು ಪರಮೋಚ್ಚ ಮೌಲ್ಯ. ಅದು ಶರಣಾಗತಿಯನ್ನು ಕಲಿಸುತ್ತದೆ, ಅಹಂನ್ನು ದೂರ ಮಾಡಿ, ಮನುಷ್ಯ ತನ್ನ ಅಂತರಂಗವನ್ನು ನೋಡುವಂತೆ ಮಾಡುತ್ತದೆ. ಹೃದಯದ ತುಂಬೆಲ್ಲ ತುಂಬಿಕೊಂಡಿರುವ ಕಲ್ಮಶ, ವಿಷಯವಾಸನೆಗಳನ್ನು ಹೋಗಲಾಡಿಸಿ ಬದುಕು ಸಾರ್ಥಕತೆಯತ್ತ ಸಾಗುವಂತೆ ಮಾಡುತ್ತದೆ, ಇಂಥ ಭಕ್ತಿಮೌಲ್ಯವನ್ನು ಆ ಕೃಷ್ಣ ಎಂದೆಂದಿಗೂ ಕರುಣಿಸುತ್ತ ಬಂದಿದ್ದಾನೆ. ಉಡುಪಿ ಸದ್ಯದಲ್ಲೇ ಮತ್ತೊಂದು ಪರ್ಯಾಯಕ್ಕೆ ಸಾಕ್ಷಿಯಾಗಲಿದೆ. ಇಂಥ ಭಕ್ತಿ ಉತ್ಸವಗಳು ನಮ್ಮೆಲ್ಲರ ಒಳಗಣ್ಣು ತೆರೆಸಲಿ. ಆ ಕೃಷ್ಣನ ನವಿಲುಗರಿಯ ಮೃದುತ್ವ ನಮ್ಮ ಮನಸ್ಸುಗಳನ್ನು ಆವರಿಸಲಿ, ಕೃಷ್ಣನ ಕೊಳಲು ನಾದದ ಮಂಗಳಮಯ ತರಂಗ ನಮ್ಮೆಲ್ಲರ ಜೀವನ ವ್ಯಾಪಿಸಲಿ, ಕೃಷ್ಣನ ಗೋವಿನನಂತು ಕಾಮಧೇನು ರಕ್ಷಣೆಗೆ ಪ್ರೇರಣೆ ನೀಡಲಿ, ಕೃಷ್ಣನ ಬೆಣ್ಣೆಯ ಬಿಳುಪಿನಂತೆ ನಮ್ಮಗಳ ಜೀವನವೂ ಶುಭ್ರವಾಗಿರಲಿ, ನಿಷ್ಕಲ್ಮಶವಾಗಿರಲಿ, ಕೃಷ್ಣನ ತುಂಟಾಟ ಜೀವನ ಪ್ರೀತಿಯನ್ನು ಹೆಚ್ಚಿಸಲಿ, ಮುಖ್ಯವಾಗಿ, ಎಲ್ಲ ಸಜ್ಜನರ ರಕ್ಷಣೆಗೆ ಧಾವಿಸಿ ಬಂದ/ಬರುವ ಕೃಷ್ಣನ ಗುಣ ನಮ್ಮ ಸ್ವಾರ್ಥಗಳನ್ನು ಕಳೆದು ಸಮಾಜಮುಖಿಯಾಗಿಸಲಿ.

**(ಕೃಪೆ : ವಿಜಯವಾಣಿ)**


# ಮಹಿಳಾ ವಿಭಾಗದ ಉಲ್ಲಾಸದ ಪ್ರವಾಸ

– ಉಷಾ ಆಚಾರ್ಯ

ಆನಂದಬಳಗದಿಂದ ದೇವಾಲಯಗಳ ದರ್ಶನ ಪ್ರವಾಸ ಏರ್ಪಡಿಸಿದ್ದಾರೆ ಎಂದು ತಿಳಿದಕೂಡಲೇ ನಾನು ತಯಾರಾದೆ. ಈ ಬಳಗದವರು ನಡೆಸುವ ಪ್ರವಾಸ ಅತ್ಯುತ್ತಮ ಮಟ್ಟದ್ದಾಗಿರುತ್ತದೆ. ನಾನು ಸುಮಾರು 15 ವರ್ಷಗಳಿಂದ ಪಾಲ್ಗೊಳ್ಳುತ್ತಿದ್ದೇನೆ. ಪ್ರತಿಯೊಬ್ಬರು ಒಂದೇ ಕುಟುಂಬದವರಂತೆ ಕಲೆತು ಬೆರೆತು, ಸರಸ ಸಂತೋಷದಿಂದ ಪಾಲ್ಗೊಳ್ಳುತ್ತಾರೆ. ಈ ಸಲದ ಪ್ರವಾಸಕ್ಕೆ ನಾನು ಮತ್ತು ನನ್ನ ತಂಗಿ ಪುಷ್ಪಲತ ಒಟ್ಟಾಗಿ ಹೊರಟೆವು.

ನವೆಂಬರ್ 30 ರಂದು ಬೆಳಿಗ್ಗೆ 6 ಗಂಟೆಗೆ ನಿರ್ಮಲಾ ಟ್ರಾವಲ್ಸ್ ನ ಬಸ್ಸಿನಲ್ಲಿ ವುಡ್‌ಲ್ಯಾಂಡ್ಸ್ ಹೋಟೆಲ್ ನಿಂದ ಹೊರಟೆವು. ಒಂದುವರೆ ಗಂಟೆ ಪ್ರಯಾಣದ ನಂತರ ಓರ್ವಾಕಲ್ ಎಂಬ ಸ್ಥಳಕ್ಕೆ ಬಂದೆವು. ಶ್ರೀ ಬಿ. ಜನಾರ್ದನ್ ರವರು ಬಸ್ಸಿನಲ್ಲಿ ಎಲ್ಲರಿಗೂ ಪ್ರವಾಸ ವಿವರಣೆಯ ಕೈಪಿಡಿ ನೀಡಿದ್ದರು. ಇದರಿಂದ ನಾವು ಸಂದರ್ಶಿಸುವ ಪ್ರದೇಶದ ವಿವರಣೆ ಮೊದಲೇ ತಿಳಿದಂತಾಗಿ ಅನುಕೂಲವಾಯಿತು. ಅಲ್ಲಿ ಊಟದ ನಂತರ ಓರ್ವಾಕಲ್ ರಾಕ್ ಗಾರ್ಡನ್‌ಗೆ ಹೋದೆವು. ಈ ಕಲ್ಲಿನ ತೋಟ ರಾಷ್ಟ್ರೀಯ ಹೆದ್ದಾರಿ 18 ರಲ್ಲಿ ಕರ್ನೂಲಿನಿಂದ 20 ಕಿಮೀ ದೂರದಲ್ಲಿದೆ. ಸುಮಾರು 1000 ಎಕರೆ ಪ್ರದೇಶದಲ್ಲಿ ದೊಡ್ಡ ದೊಡ್ಡ ಬಂಡೆಗಳಿಂದ ಸುಂದರವಾದ ಆಕೃತಿಗಳು ನಿರ್ಮಾಣವಾಗಿವೆ. ಇಡೀ ಪ್ರದೇಶದಲ್ಲಿ ಚಿಕ್ಕ ಚಿಕ್ಕ ಕೊಳಗಳ ಮಧ್ಯದಲ್ಲಿ ಶಿಲ್ಪಿಯೊಬ್ಬ ತನ್ನ ಕಲ್ಪನೆಯಂತೆ ಕಲ್ಲಿನಲ್ಲಿ ಕೆತ್ತಿರುವನೋ ಎಂಬಂತೆ ಬಂಡೆಗಳಲ್ಲಿ ಪ್ರಕೃತಿ ಸೊಗಸಾದ ಆಕೃತಿಗಳನ್ನು ರಚಿಸಿದೆ.

ಪ್ರಕೃತಿ ತನ್ನ ಚಿತ್ರವಿಚಿತ್ರವಾದ ಸೃಷ್ಟಿಯಿಂದ ಮಾನವನನ್ನು ಸದಾಕಾಲ ಆಶ್ಚರ್ಯಗೊಳಿಸುತ್ತಿದೆ. ಭಾರತದ ಗ್ರಾಂಡ್ ಕ್ಯಾನಿಯನ್ ಎಂಬಂತಿರುವ ಓರ್ವಾಕಲ್ ರಾಕ್ ಗಾರ್ಡನ್ ಇದಕ್ಕೊಂದು ಉದಾಹರಣೆ. ಪದರು ಪದರಾಗಿರುವ ಬಂಡೆಗಳು ಅಗ್ನಿಪರ್ವತದ ಹೊರ ಹೊಮ್ಮುವಿಕೆ ಇರಬಹುದು. ಬಂಡೆಗಳ ಮೇಲೆ ಹತ್ತಿ ಕೆಳಕ್ಕಿಳಿದು ಮುಂದೆ ಸಾಗಿದರೆ ಮನಮೋಹಕವಾದ ಪಾಕೃತಿಕ ದೃಶ್ಯಗಳು ಮನಸೆಳೆಯುತ್ತದೆ. ಅನೇಕ ಚಲನಚಿತ್ರಗಳು ಇಲ್ಲಿ ಚಿತ್ರೀಕರಣ ಗೊಂಡಿವೆ.





ಮುಂದೆ ನಮ್ಮ ಮುಂದಿನ ದೇವಾಲಯ ದರ್ಶನ ಯಗಂಟಿ ದೇವಾಲಯ. ಈ ದೇವಾಲಯ ವೈಷ್ಣವ ಶೈಲಿಯಲ್ಲಿರುವ ಶಿವ ದೇವಾಲಯ, ಈ ದೇವಾಲಯವನ್ನು 15ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಅರಸರಾದ ಹರಿಹರ ಬುಕ್ಕರಾಯ ನಿರ್ಮಿಸಿದ್ದಾರೆ. ಸ್ಥಳ ಪುರಾಣದ ಕಥೆ 5–6ನೇ ಶತಮಾನಕ್ಕೆ ಹೋಗುತ್ತದೆ. ಅಗಸ್ತ್ಯ ಮಹಾಮುನಿಗಳು ಶ್ರೀನಿವಾಸ ದೇವರಿಗಾಗಿ ಒಂದು ದೇವಾಲಯ ನಿರ್ಮಿಸಲು ಬಯಸಿದರಂತೆ. ಅದರಂತೆ ವೈಷ್ಣವ ಶೈಲಿಯಲ್ಲಿ ದೇವಾಲಯ ನಿರ್ಮಾಣವಾಯಿತು. ಶ್ರೀನಿವಾಸ ದೇವರ ವಿಗ್ರಹ ಪ್ರತಿಷ್ಠಾಪನೆ ಮಾಡುವ ಸಮಯದಲ್ಲಿ ವಿಗ್ರಹದ ಕಾಲ್ಬೆರಳು ಮುರಿದಿರುವುದು ಕಂಡು ಬಂತು. ಇದರಿಂದ ಬೇಸರಗೊಂಡ ಅಗಸ್ತ್ಯ ಮುನಿಗಳು ಶಿವವನ್ನು ಕುರಿತು ತಪಸ್ಸು ಮಾಡಿದರು. ಶಿವ ಪ್ರತ್ಯಕ್ಷನಾಗಿ ಈ ಪ್ರದೇಶವು ಕೈಲಾಸವನ್ನು ಹೋಲುವುದರಿಂದ ಇಲ್ಲಿ ಶಿವನ ವಿಗ್ರಹವನ್ನು ಪ್ರತಿಷ್ಠೆ ಮಾಡಬೇಕೆಂದು ತಿಳಿಸಿದರು. ಅಗಸ್ತ್ಯರ ಕೋರಿಕೆಯಂತೆ ಶಿವನು ಅರ್ಧನಾರೀಶ್ವರನಾಗಿ ಒಂದೇ ಶಿಲೆಯಲ್ಲಿ ಪಾರ್ವತಿಯೊಡನೆ ಈ ದೇವಾಲಯದಲ್ಲಿ ವಿರಾಜಮಾನ ನಾಗಿದ್ದಾನೆ. ಧಾರ್ಮಿಕತೆಯ ಮಹತ್ವದಿಂದ ಮತ್ತು ಅಪರೂಪದ ಕಲಾಕೃತಿಗಳಿಂದ ಈ ದೇವಾಲಯವು ಪ್ರಸಿದ್ಧಿ ಪಡೆದಿದೆ. ಶಿವ ಲಿಂಗ ರೂಪದಲ್ಲಿ ಅಲ್ಲದೇ ವಿಗ್ರಹ ರೂಪದಲ್ಲಿ ಪೂಜೆಗೊಳ್ಳುತ್ತಿರುವ ದೇವಾಲಯ ಇದೊಂದೇ ಎಂದು ತಿಳಿಯುತ್ತದೆ.

60–70 ಮೆಟ್ಟಿಲುಗಳ ಮೇಲೆ ಇರುವ ದೇವಾಲಯದಲ್ಲಿ ಅನೇಕ ಪಾಕೃತಿಕ ಗುಹೆಗಳಲ್ಲಿ ಸಾವಿರಾರು ವರ್ಷಗಳಿಂದ ಅನೇಕ ಋಷಿಗಳು ತಪಸ್ಸು ಮಾಡಿದ್ದಾರೆ. ಕಾಲಜ್ಞಾನ ಗ್ರಂಥವನ್ನು ಬರೆದ ತೆಲಗು ಸಂತಕವಿ ಹಾಗೂ ಜ್ಯೋತಿಷಿ ಪೋಟುಲೂರಿ ವೀರಬ್ರಾಹ್ಮಣಗಾರು ಇಲ್ಲಿಯೇ ತಪಸ್ಸು ಮಾಡಿದ್ದರು. ಈ ಸ್ಥಳದ ವಿಶೇಷತೆ ಎಂದರೆ ಇಲ್ಲಿ ಕಾಗೆಗಳು ಕಾಣಸಿಕುವುದಿಲ್ಲ. ಅಗಸ್ತ್ಯರು ತಮ್ಮ ತಪಸ್ಸಿಗೆ ಭಂಗ ತಂದ ಕಾಗೆಗಳನ್ನು ಈ ಸ್ಥಳಕ್ಕೆ ಬರದ ಹಾಗೆ ಶಪಿಸಿದ್ದರಂತೆ. ಸದಾಕಾಲ ಶುದ್ಧ ಸ್ಪಟಿಕದಂತಹ ನೀರು ಬೆಟ್ಟದ ಕೆಳಭಾಗದಿಂದ ನಂದಿಬಾಯಿ ಮುಖಾಂತರ ಇಲ್ಲಿರುವ ಅಗಸ್ತ್ಯ ಪುಷ್ಕರಣಿಯಲ್ಲಿ ಬೀಳುತ್ತದೆ. ಈ ನೀರು ಎಲ್ಲಿಂದ ಬರುತ್ತದೆ ಎನ್ನುವುದು ಯಾರಿಗೂ ತಿಳಿದಿಲ್ಲ.

ಭಗ್ನವಾಗಿರುವ ವೆಂಕಟೇಶ್ವರ ವಿಗ್ರಹವನ್ನು ಮತ್ತೊಂದು ಗುಹೆಯಲ್ಲಿ ಪ್ರತಿಷ್ಠಾಪಿಸಿದ್ದಾರೆ. 60–70 ಮೆಟ್ಟಿಲುಗಳ ಮೇಲಿರುವ ಈ ಗುಹೆಯಲ್ಲಿರುವ ವೆಂಕಟೇಶ್ವರ ವಿಗ್ರಹವನ್ನು

ತಿರುಪತಿಯ ದೇವಾಲಯವನ್ನು ನಿರ್ಮಿಸುವ ಮೊದಲೇ ಪ್ರತಿಷ್ಠಾಪಿಸಿದರೆಂದು ಐತಿಹ್ಯ.

ಯಗಂಟಿ ದೇವಾಲಯದ ನಂದಿಯಲ್ಲೊಂದು ವಿಶೇಷತೆ ಇದೆ. ನಂದಿ ಶಿವನ ಎದುರಿನಲ್ಲಿಲ್ಲ. ಮುಖ್ಯ ಮಂಟಪದ ಬಂದು ಬದಿಯಲ್ಲಿದೆ. ನಂದಿಯನ್ನು ಕೆತ್ತಿದ ಶಿಲೆ ಬೆಳೆಯುವ ಪ್ರವೃತ್ತಿ ಹೊಂದಿರುವ ಕಾರಣ ಈ ನಂದಿಯು ಬೆಳೆಯುತ್ತಿದೆ ಎಂದು ಹೇಳುತ್ತಾರೆ. ASI ಕೂಡ ಈ ನಂದಿ 20 ವರ್ಷಗಳಲ್ಲಿ ಒಂದು ಅಂಗುಲ ಬೆಳೆಯುತ್ತಿದೆ ಎಂದು ಹೇಳಿದ್ದಾರೆ ಕಾಲಜ್ಞಾನದ ಪ್ರಕಾರ ಕಲಿಯುಗ ಅಂತ್ಯದಲ್ಲಿ ಯಗಂಟಿ ನಂದಿ ಎದ್ದು ಜೋರಾಗಿ ಕೂಗುತ್ತದೆಯಂತೆ.



ಮೊದಲನೆ ದಿನದ ಪ್ರವಾಸದಲ್ಲಿಯೇ ಬಹಳ ವಿಷಯಗಳನ್ನು ತಿಳಿದು ಅವುಗಳ ಬಗ್ಗೆ ಚರ್ಚಿಸುತ್ತಾ ನಂದ್ಯಾಲಕ್ಕೆ ಬಂದು ಹೋಟೆಲ್ ಸೂರಜ್ ಗ್ರಾಂಡ್‌ನಲ್ಲಿ ಊಟ ಮಾಡಿ ಮಲಗಿದೆವು.

ಎರಡನೆಯ ದಿನದ ಪ್ರವಾಸ ಅಹೋಬಲಕ್ಕೆ. ಅಹೋಬಲ, ಕರ್ನೂಲ್ ಜಿಲ್ಲೆಯ ಅಲ್ಲಗಡ ಮಂಡಲದಲ್ಲಿರುವ ಪವಿತ್ರ ನವನರಸಿಂಹಸ್ವಾಮಿಯ ಕ್ಷೇತ್ರ. ಕರ್ನೂಲಿನಿಂದ ಚಿತ್ತೂರ ವರೆಗಿನ ನಲ್ಲಮಲ್ಲ ಬೆಟ್ಟಗಳು, ಬಾಲ ಶ್ರೀಶೈಲದಲ್ಲಿರುವ ದೇಹ ಅಹೋಬಲದಲ್ಲಿರುವ ತಲೆ, ತಿರುಪತಿಯಲ್ಲಿರುವ ಆದಿಶೇಷನ ರೂಪ ಎನ್ನುವ ನಂಬಿಕೆ. ನಲ್ಲಮಲ್ಲ ಕಾಡಿನಲ್ಲಿರುವ ನರಸಿಂಹಸ್ವಾಮಿಯ ದೇವಾಲಯಗಳನ್ನು 8ನೇ ಶತಮಾನದಲ್ಲಿ ಚಾಲಕ್ಯರು ನಿರ್ಮಿಸಿದ್ದರೂ 15 ಶತಮಾನದಲ್ಲಿ ವಿಜಯನಗರದ ಅರಸರು ಪುನಃ ನಿರ್ಮಾಣ ಮಾಡಿದ್ದಾರೆ. ಅಹೋಬಲ ಪಟ್ಟಣವನ್ನು ಎಗುವ– ದಿಗುವ ಎಂದು ಎರಡು ಭಾಗ ಮಾಡಲಾಗಿದೆ. ಎಗುವ ಎಂದರೆ ಮೇಲೆ, ದಿಗುವ ಎಂದರೆ ಕೆಳಗೆ. ಗರುಡ, ನರಸಿಂಹಸ್ವಾಮಿಯನ್ನು ಅವತಾರಗಳ ರೂಪದಲ್ಲಿ ನೋಡಲು ಇಚ್ಚಿಸಿದರಂತೆ. ಗರುಡನ ಆಸೆಯಂತೆ ಅಹೋಬಲದ ವೇದಾದ್ರಿ – ಗರುಡಾದ್ರಿ ಬೆಟ್ಟಗಳ ದಟ್ಟಕಾಡಿನ ಮಧ್ಯದಲ್ಲಿ ಒಂಬತ್ತು ರೂಪದಿಂದ ನರಸಿಂಹ ದರ್ಶನ ಕೊಟ್ಟನಂತೆ.

ನಾವು ಮೊದಲು ನೋಡಿದ್ದು ಕಾರಿಂಜ ನರಸಿಂಹ ದೇವಾಲಯವನ್ನು. ಕಾರಿಂಜ (ಹೊಂಗೆ) ಮರದ ಕೆಳಗೆ ಆಂಜನೇಯನ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಗರುಡಾದ್ರಿ ಬೆಟ್ಟದ ತಪ್ಪಲಿನಲ್ಲಿ ಭವನಾಶನಿ ನದಿಯ ದಡದಲ್ಲಿ ಈ ದೇವಾಲಯವಿದೆ. ಆಂಜನೇಯ ತಪಸ್ಸು ಮಾಡಿದಾಗ ನರಸಿಂಹ ಪ್ರತ್ಯಕ್ಷವಾದನಂತೆ. ಶ್ರೀರಾಮನನ್ನಲ್ಲದೇ ಬೇರೆಯವರನ್ನು ತಾನು ಗುರುತಿಸಲು ನಿರಾಕರಿಸಿದಾಗ ನರಸಿಂಹ ಕೈಯಲ್ಲಿ ಬಿಲ್ಲನ್ನು ಧರಿಸಿ ಪ್ರತ್ಯಕ್ಷನಾದನಂತೆ. ಅಂತೆಯೇ ನರಸಿಂಹನ ವಿಗ್ರಹದಲ್ಲಿ ಬಿಲ್ಲನ್ನು ತೋರಿಸಲಾಗಿದೆ. ನಾವು ಹೋದಾಗ ದೇವಸ್ಥಾನದ ರಿಪೇರಿ ಕೆಲಸ ನಡೆಯುತ್ತಿತ್ತು.

ನಂತರ ಸುಮಾರು 50 – 60 ಮೆಟ್ಟಲುಗಳನ್ನೇರಿ ಉಗ್ರನರಸಿಂಹನ ದರ್ಶನ ಮಾಡಿದೆವು. ದೇವಾಲಯದ ಎದುರಿನಲ್ಲಿ ಉಗ್ರ ಸ್ತಂಭವೆಂಬ ಒಂದು ದೊಡ್ಡ ಸ್ಥಂಭವಿದೆ. ಮುಂದೆ ಸುಮಾರು ಮೆಟ್ಟಲುಗಳು ಕಾಲ್ನಡಿಗೆಯಲ್ಲಿ ಸಾಗಿದಾಗ ಸಿಕ್ಕುವುದು ಮಾಲೋಲ ನರಸಿಂಹ. ಇಲ್ಲಿ ನರಸಿಂಹನೊಡನೆ ಲಕ್ಷ್ಮಿ ಇದ್ದಾಳೆ. ಇಲ್ಲಿ ಹಿರಣ್ಯಕಷಿಪುವನ್ನು ಕೊಂದು ಉಗ್ರನಾಗಿದ್ದ ನರಸಿಂಹನನ್ನು ಪ್ರಹ್ಲಾದ ಶಾಂತಗೊಳಿಸುತ್ತಾನೆ. ಮುಂದೆ ದಾರಿ ಕಡಿದಾಗಿ ಸಾಗುತ್ತದೆ. ಮೆಟ್ಟಿಲುಗಳನ್ನೇರಿ ದಾರಿಯಲ್ಲಿ ಸಾಗಿ ಮುಂದೆ ಹೋದರೆ ಸಿಕ್ಕುವುದು ಕ್ರೋಡ ನರಸಿಂಹ. ಇಲ್ಲಿ ವರಾಹರೂಪಿಯಾದ ನರಸಿಂಹ ಪೂಜೆಗೊಳ್ಳುತ್ತಾರೆ. ಭೂದೇವಿಯನ್ನು ತನ್ನ ಕೋರೆ ದಾಡೆಯಲ್ಲಿ ಹೊತ್ತ ನರಸಿಂಹನ ಮೂರ್ತಿ ಬಹಳ ಸುಂದರವಾಗಿದೆ. ಮುಂದಿನ ದಾರಿ ಅತಿ ಕಷ್ಟಕರವಾದದ್ದು ದಾರಿಯೇ ಇಲ್ಲದ ಕಲ್ಲು ಮುಳ್ಳುಗಳ ನಡುವೆ ದಟ್ಟಕಾಡಿನ ಮಧ್ಯದಲ್ಲಿ ಜಾರುತ್ತಿರುವ ಬಂಡೆಗಳ ಮೇಲೆ ಹರಿಯುತ್ತಿರುವ ನೀರಿನ ಮಧ್ಯೆ ನಮ್ಮ ಪ್ರಯಾಣ ಸುಮಾರು 1 ಗಂಟೆ ನಡಿಗೆಯ ನಂತರ ಸಿಕ್ಕುವುದೇ ಜ್ವಾಲಾ ನರಸಿಂಹ ದೇವಾಲಯ. ಆ ಪ್ರದೇಶವೆಲ್ಲಾ ಹಿರಣ್ಯಕಷಿಪುವಿನ ಅರಮನೆ, ಜ್ವಾಲಾ ನರಸಿಂಹ ದೇವಾಲಯ ಇರುವ ಸ್ಥಳ ಅರಮನೆಯ ದೇವರ ಮನೆ. ಇಲ್ಲಿಯೇ ಹಿರಣ್ಯಕಷಿಪ ಸ್ತಂಭವನ್ನು ಒಡೆದಿದ್ದು, ನರಸಿಂಹ ಅವತಾರವಾದದ್ದು. ಇನ್ನೂ ಸ್ವಲ್ಪ ಮೇಲೇರಿ ಹೋದರೆ ಸ್ತಂಭವಿದೆ. ನೀರಿನ ಜಲಪಾತಗಳನ್ನು ದಾಟಿ ದೇವಾಲಯಕ್ಕೆ ಹೋಗಬೇಕು, ಇಲ್ಲಿಯೇ ರಕ್ತ ಕುಂಡವೆಂಬ ಸಣ್ಣ ಕೊಳವಿದೆ. ಅಲ್ಲಿ ರಕ್ತಸಿಕ್ತವಾದ ತನ್ನ ಕೈಗಳನ್ನು ನರಸಿಂಹ ತೊಳೆದನೆಂದು ಪ್ರತೀತಿ.

ಮೇಲೆ ಹತ್ತಿದ 2 ಗಂಟೆಗಳ ಹಾದಿಯನ್ನು ಮತ್ತೆ ವಾಪಸ್ಸು ಬರಬೇಕೆನ್ನುವುದನ್ನು ನೆನಸಿಕೊಂಡರೇ ಭಯವಾಗುತ್ತಿತ್ತು. ಡೋಲಿ ಇದ್ದರೂ ನಮಗೆ ಹೋಗುವಾಗ ಸಿಕ್ಕಲಿಲ್ಲ. ಬರುವಾಗ ಇಬ್ಬರಿಗೆ ಡೋಲಿಯಲ್ಲಿ ಬರುವ ಅವಕಾಶ ಸಿಕ್ಕಿತು.

ವಾಪಾಸು ಕೆಳಗೆ ಬಂದಾಗ ಸುಮಾರು 4 ಗಂಟೆ ಬ್ರಾಹ್ಮಣರ ಅನ್ನ ಛತ್ರದಲ್ಲಿ ಊಟ ಮಾಡಿದೆವು. ನಂತರ ದಿಗುವ ಅಹೋಬಲದಲ್ಲಿ ಪ್ರಹ್ಲಾದವರದ ನರಸಿಂಹ ದೇವಾಲಯಕ್ಕೆ ಹೋದೆವು. ಬಹಳ ವಿಸ್ತಾರವಾದ ವಿವಿಧ ಆಕೃತಿ, ಅನೇಕ ಕಂಬಗಳ ದೇವಾಲಯ ಚಾಲುಕ್ಯ ಶೈಲಿಯ ಸುಂದರ

ದೇವಾಲಯದಲ್ಲಿ ಲಕ್ಷ್ಮೀ ಸಮೇತನಾದ ನರಸಿಂಹ ಪೂಜೆಗೊಳ್ಳುತ್ತಾನೆ. ಅಲ್ಲಿ ನಮ್ಮ ಗುಂಪಿನವರು ನರಸಿಂಹ ಸ್ತೋತ್ರ ಪಠಿಸಿದರು. ಮತ್ತೆರಡು ದೇವಾಲಯಗಳು ಬಾಗಿಲು ಹಾಕಿದ್ದರಿಂದ ವಾಪಾಸು ನಂದ್ಯಾಲದ ಸೂರಜ್ ಗ್ರ್ಯಾಂಡ್ ಹೋಟೆಲ್‌ಗೆ ಬಂದು ವಿರಮಿಸಿದೆವು.

ಮರುದಿನ ಡಿಸೆಂಬರ್ 3ನೇ ತಾರೀಖು ಮೊದಲು ನೋಡಿದ್ದು ಯೋಗಾನಂದ ನರಸಿಂಹ ದೇವಾಲಯ. ಯೋಗ ವಿನ್ಯಾಸದ ಭಂಗಿಯಲ್ಲಿರುವ ನರಸಿಂಹ ಹಿರಣ್ಯಕಷಿಪುವಿನ ಸಂಹಾರದ ನಂತರ ಪ್ರಹ್ಲಾದನಿಗೆ ಅನೇಕ ಯೋಗದ ಆಸನಗಳನ್ನು ಕಲಿಸಿದನಂತೆ. ಸುಂದರ ಪರಿಸರ ಮನ ಮೋಹಕ ವಾತಾವರಣ ನೋಡಿ ಹಿಂದಿನ ದಿನದ ಆಯಾಸವೆಲ್ಲಾ ಸ್ವಲ್ಪ ಮಟ್ಟಿಗೆ ಪರಿಹಾವಾದಂತಾಯಿತು. ಮುಂದಿನ ದೇವಾಲಯ ಚಕ್ರವತ ನರಸಿಂಹ ದೇವಾಲಯ. ಬೆಳಗಿನ ಸುಂದರ ವಾತಾವರಣದಲ್ಲಿ ಶಾಂತಮುದ್ರೆಯಿಂದ ನರಸಿಂಹ ಮುಗಳ್ ನಗುತ್ತಿದ್ದಾನೆ. ಗಂಧರ್ವ ದೇವತೆಗಳು ನರಸಿಂಹನನ್ನು ಸುತ್ತಿಸುತ್ತಿದ್ದಾಗ ತಾಳಹಾಕುತ್ತಾ ನರಸಿಂಹ ಸಂಗೀತ ಕೇಳುತ್ತಿದ್ದನಂತೆ. ಇಂದಿಗೂ ರಾತ್ರಿಯಲ್ಲಿ ಆಹಾ ಉಹೂ ಗಂಧರ್ವರು ಬಂದು ಇಲ್ಲಿ ಹಾಡುತ್ತಾರೆ ಎನ್ನುವ ನಂಬಿಕೆ. ನಮ್ಮ ಗುಂಪಿನವರು ಸಂಗೀತ ಪ್ರಿಯ ನರಸಿಂಹನ ಮುಂದ ಬಹಳ ಹಾಡುಗಳನ್ನು ಹಾಡಿದರು. ಆ ಸಮಯದ ಅರ್ಚಕರು ಪೂಜೆ ಮಾಡುತ್ತಿದ್ದರು. ಆಹ್ಲಾದಕರ ಪರಿಸರ ಮನಸ್ಸಿಗೆ ಮುದ ನೀಡಿತ್ತು.

ನಂತರ ಕಾಡಿನ ಮಧ್ಯದಲ್ಲಿ ಜೀಪಿನಲ್ಲಿ 16 ಕಿ.ಮೀ. ಹಳ್ಳ ದಿಣ್ಣೆಗಳ ಮಧ್ಯೆ ಪ್ರಯಾಣಿಸಿದಾಗ ಸಿಕ್ಕದ್ದು ಪಾವನ ನರಸಿಂಹ ದೇವಾಲಯ, ಈ ದೇವಾಲಯ ಪಾವನ ನದಿಯ ದಂಡೆಯ ಮೇಲಿದೆ. ಇಲ್ಲಿಂದ ನರಸಿಂಹ ಶಾಂತ ಮುಖ ಭಾವದಿಂದ ರಾರಾಜಿಸುತ್ತಾನೆ. ಈ ಸ್ಥಳದಲ್ಲಿ ಭಾರಧ್ವಾಜ ಮುನಿಯ ಬ್ರಹ್ಮಹತ್ಯಾದೋಷವನ್ನು ಪರಿಹರಿಸಿದ ನರಸಿಂಹ, ಭಕ್ತರು ಗೊತ್ತಿದ್ದೂ ಗೊತ್ತಿಲ್ಲದೆಯಾ ಮಾಡಿದ ಪಾಪಗಳನ್ನು ಪರಿಹರಿಸುತ್ತಾನೆಂದು ನಂಬಿಕೆ, ದೇವರ ವಿಗ್ರಹದ ಪಕ್ಕದಲ್ಲಿ ದೊಡ್ಡದಾದ ನರಸಿಂಹ ಸಾಲಿಗ್ರಾಮವಿದೆ. ಅದರೊಳಗೆ ಇರುವ ಸ್ತಂಭವನ್ನು ಅರ್ಚಕರು ತೋರಿಸುತ್ತಾರೆ. ಪಾನಕವನ್ನು ನೈವೇದ್ಯ ಮಾಡಿ ಬಂದ ಭಕ್ತರಿಗೆ ನೀಡುತ್ತಾರೆ.

6 ಕಿ.ಮೀ ವಾಪಾಸು ಜೀಪಿನಲ್ಲಿ ಬಂದು ಮತ್ತೆ 5 ಕಿ.ಮೀ ಜೀಪಿನಲ್ಲಿ ಹೋಗಿ 132 ಮೆಟ್ಟಿಲೇರಿ ಭಾರ್ಗವ ನರಸಿಂಹ ದೇವಾಲಯದ ದರ್ಶನ. ಪರಶುರಾಮ ತಪಸ್ಸು ಮಾಡಿದಾಗ ಯಜ್ಞಕುಂಡದಲ್ಲಿ ನರಸಿಂಹನ ಮೂರ್ತಿಯ ಉದ್ಬವ. ಬೆಟ್ಟದ ಮೇಲೆ ಪ್ರಶಾಂತ ವಾತಾವರಣ ನವ ನರಸಿಂಹರನ್ನು ನೋಡಿ ಧನ್ಯತೆಯ ಭಾವದಿಂದ ವಾಪಾಸು ಬಸ್ಸಿಗೆ ಬಂದೆವು. ಆಂಧ್ರ ಪ್ರದೇಶ ಪ್ರವಾಸಿ ಹೋಟೆಲ್‌ನಲ್ಲಿ ಊಟ ಮಾಡಿ ಮಹಾನಂದಿಗೆ ಪ್ರಯಾಣ.

1500 ವರ್ಷಕ್ಕೂ ಹಿಂದಿನದಾದ ಮಹಾನಂದಿ ದೇವಾಲಯ 10ನೇ ಶತಮಾನದಲ್ಲಿ ಹಲವು ಭಾರಿ ರಿಪೇರಿ ಆಗಿಯೂ ಮತ್ತೆ ನಿರ್ಮಾಣವಾಗಿದೆ. ಮಹಾನಂದಿ ತೀರ್ಥ ಕ್ಷೇತ್ರದ ದಂತಕಥೆಯ ಪ್ರಕಾರ ಶಿಲಾಧನನೆಂಬ ಶಿವಭಕ್ತ ನಲ್ಲಮಲ್ಲ ಕಾನನದಲ್ಲಿ ತಪಸ್ಸು ಮಾಡಿ ಮಹಾನಂದ ಎನ್ನುವ ಶಿವಭಕ್ತನಾದ ಪುತ್ರನನ್ನು ಪಡೆದನು. ಮಹಾನಂದ ಮುಂದೆ ತನ್ನನ್ನು ಶಿವನ ವಾಹನವನ್ನಾಗಿ ಮಾಡಬೇಕೆಂದು ಕೇಳಿಕೊಂಡ. ಶಿವನ ಅನುಗ್ರಹದ ಆ ಪ್ರದೇಶ ದೈವೀ ಶಕ್ತಿಯ ಕ್ಷೇತ್ರವಾಯಿತು. ಹರಿಯುವ ನೀರಿನಿಂದ ತೀರ್ಥವಾಯಿತು. ಚಾಲುಕ್ಯ ಶೈಲಿಯ ಸುಂದರ ದೇವಾಲಯದಲ್ಲಿ ಬ್ರಹ್ಮ ಕುಂಡ, ವಿಷ್ಣು ಕುಂಡ,



ಶಿವಕುಂಡವೆಂಬ ತೀರ್ಥಗಳಿವೆ. ಶಿವ ವಿಷ್ಣು ಕುಂಡಗಳಲ್ಲಿ ಸ್ನಾನ ಮಾಡಿದರೆ ದೇಹದ ಬಾಧೆಗಳು ನಾಶವಾಗುವುದೆಂಬ ನಂಬಿಕೆ.

11 ನೇ ಶತಮಾನದಲ್ಲಿ ನಂದಕುಮಾರ ಎನ್ನುವ ರಾಜ ಶಿವನಿಗೆ ಅಭಿಷೇಕಕ್ಕಾಗಿ ಗೋಶಾಲೆ ನಿರ್ಮಿಸಿದ ಮೇವಿಗಾಗಿ ದನಗಳನ್ನು ಹೊರಗೆ ಬಿಟ್ಟಾಗ ಒಂದು ದನ ಕಾಡಿನ ಹುತ್ತಕ್ಕೆ ಹೋಗಿಹಾಲೆರೆದು ಬರುತ್ತಿತ್ತು. ಅದನ್ನು ತಿಳಿದ ರಾಜ ಹುತ್ತವನ್ನು ಒಡೆದ. ಹುತ್ತದೊಳಗಿದ್ದ ಒಬ್ಬ ಬಾಲಕ ಕೂಡಲೇ ಅದೃಶ್ಯನಾದ. ಕಳವಳಕ್ಕೊಳಗಾದ ರಾಜನಿಗೆ ಕನಸಿನಲ್ಲಿ ಶಿವ ಕಾಣಿಸಿಕೊಂಡು ನಡೆದುದೆಲ್ಲವೂ ನನ್ನ ಲೀಲೆ. ಅದೇ ಸ್ಥಳದಲ್ಲಿ ಒಂದು ದೇವಾಲಯ ಕಟ್ಟಿಸು ಎಂದು ಆಜ್ಞಾಪಿಸಿದ. ಅದರಂತೆ ಅಲ್ಲಿ ದೊಡ್ಡ ದೇವಾಲಯ ನಿರ್ಮಾಣವಾಗಿದೆ. ನಾವು ಅಲ್ಲಿಗೆ ಹೋದ ಸಮಯದಲ್ಲಿ ನಿಜರೂಪ ದರ್ಶನ ಸಮಯ. ದೇವರಿಗೆ ಅಭಿಷೇಕ ಆರತಿ ನಂತರ ಎಲ್ಲರು ದೇವರನ್ನು ಮುಟ್ಟಿ ಅಭಿಷೇಕದ ನೀರನ್ನು ಪ್ರೋಕ್ಷಣ ಮಾಡಿಕೊಳ್ಳಲು ತಿಳಿಸಿದರು. ಹುತ್ತ ಒಡೆದಿದೆ. ಸುತ್ತ ಪಾಣಿ ಪೀಠವಿರುವುದು ಗೊತ್ತಾಗುತ್ತದೆ. ದಿವ್ಯ ಸನ್ನಿಧಿಯಲ್ಲಿ ಎಲ್ಲರೂ ದರ್ಶನ ಪಡೆದು ಪುಲಕಿತ ರಾದರು. ನಂದಾಲ್ಯದ ಹೋಟಲ್‌ನಲ್ಲಿ ವಿರಮಿಸುವ ಮೂಲಕ ಮೂರನೇ ದಿನದ ಪ್ರವಾಸ ಕೊನೆಗೊಂಡಿತು.

– ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು....

*With Best Compliments From :*

# M. BHASKAR RAO



## ಶ್ರೀ ಗಣೇಶ ಸ್ಟೀಲ್ ಸೆಂಟರ್

# 12, S.L.N. Charties Building, Vanivilasa Institute Road
Kalasipalyam Post, Bangalore - 560 002
Phone : Shop : 2670 9752 / Residence : 2669 5751

ಶುಭಾಶಯಗಳೊಡನೆ,

## ಬಿ.ಗಣಪತಿ ಹೆಬ್ಬಾರ್



## ಶ್ರೀ ಅಕ್ಷಯ ಉಪಾಹಾರ್

ವಿ.ವಿ.ಐ. ರಸ್ತೆ, ಫೋರ್ಟ್
ಬೆಂಗಳೂರು 560 002
ಮೊಬೈಲ್ : 99724 29854

ಶುಭಾಶಯಗಳೊಡನೆ,

**ಕೋಟೇಶ್ವರ ಸೂರ್ಯನಾರಾಯಣ ರತ್ನ ಟ್ರಸ್ಟ್ ರಿ.**

ಮತ್ತು

## ಮಹಾಲಕ್ಷ್ಮೀ ಫ್ಯಾನ್ಸಿ ಸ್ಟೋರ್ಸ್

21/2, ಕೋಟೇಶ್ವರ ರಸ್ತೆ, ಡಿವಿಜಿ ಅಡ್ಡರಸ್ತೆ,
ಬಸವನಗುಡಿ, ಬೆಂಗಳೂರು - 04
ದೂರವಾಣಿ : ಉದ್ಯಮ : 26675378, ಮನೆ : 26624163
ಸಹಯೋಗ : ಕೆ.ಎಸ್. ರಮೇಶ್



# ಜೀವನದ ಮಾರ್ಗಗಳು

ನಿಮ್ಮ ಮನೆಯನ್ನು ಭಗವಂತನ ಮನೆಯನ್ನಾಗಿ ಮಾಡಿ ಆಗ ಅಲ್ಲಿ ಬೆಳಕು, ಪ್ರೀತಿ, ಸಮೃದ್ಧಿ ಇರುತ್ತದೆ. ನಿಮ್ಮ ದೇಹವನ್ನು ಭಗವಂತನ ಆವಾಸಸ್ಥಾನವನ್ನಾಗಿ ಮಾಡಿ ಅಲ್ಲಿ ಶಾಂತಿ ಮತ್ತು ಪರಮಾನಂದ ಬರುತ್ತದೆ. ನಿಮ್ಮ ಮನಸ್ಸು ಭಗವಂತನ ಆಟಿಕೆ ಎಂದು ಭಾವಿಸಿ ನೀವು ಅವರ ಎಲ್ಲಾ ಆಟಗಳನ್ನು ನೋಡಿ ಆನಂದಿಸುತ್ತೀರಿ.

ಈ ಪ್ರಪಂಚವೇ ಭಗವಂತನ ಲೀಲೆ ಮತ್ತು ಅವನದ್ದೇ ಸೃಷ್ಟಿ ಎಂದು ಅರಿತುಕೊಳ್ಳಿ. ಆಗ ನೀವು ಅದ್ವೈತ ಆತ್ಮದ ಮೇಲೆ ಭರವಸೆ ಇಡುತ್ತೀರಿ.

ನೀವು ಉದಾರಿಯಾಗಿದ್ದರೆ ದೈವಕೃಪೆ ನಿಮ್ಮಲ್ಲಿಗೆ ಸಮೃದ್ಧಿಯ ರೂಪದಲ್ಲಿ ಬರುತ್ತದೆ. ನೀವು ಕಷ್ಟಪಟ್ಟು ಕೆಲಸ ಮಾಡುವವರಾದರೆ ದೈವಕೃಪೆ ಆನಂದದ ರೂಪದಲ್ಲಿ ಬರುತ್ತದೆ. ನೀವು ಸೋಮಾರಿಯಾಗಿದ್ದರೆ ದೈವಕೃಪೆ ನಿಮಗೆ ಕಷ್ಟದ ಕೆಲಸದ ರೂಪದಲ್ಲಿ ಬರುತ್ತದೆ.

ಈಗ ಮನಸ್ಸಿನ ಮೇಲೆ ಪ್ರಭಾವ ಬೀರುವ ಅಂಶಗಳ ಬಗ್ಗೆ ತಿಳಿಯೋಣ. ಮನಸ್ಸಿನಲ್ಲಿ ಬಯಕೆ ಪ್ರಧಾನವಾದಾಗ ಆತ್ಮಜಾಗೃತಿ ಅಲಕ್ಷ್ಯೆಯೆ ಪ್ರಧಾನವಾದಾಗ ಆನಂದದ ಉದಯ.

ದೈವಚಿಂತನೆ ಮಾಡಿದಾಗ ಆತ್ಮಜಾಗೃತಿ. ಮನದಲ್ಲಿ ಆತ್ಮೀಯ ಭಾವ ಇಲ್ಲದಿದ್ದಾಗ ಸಾಧಕನ ಜೀವನವು ಚಂಚಲವಾಗುವುದು.

ಮನಸ್ಸಿನ ಹಂಬಲಗಳು, ತಿರಸ್ಕಾರಗಳು ಸಾಧಕನಿಗೆ ಅಧ್ಯಾತ್ಮನಿಧಿಯನ್ನು ಬೆಳೆದಂತೆ ದೂರುಗಳು, ನಕಾರಾತ್ಮಕ ಭಾವನೆಗಳು ನಿಮ್ಮ ಬುದ್ಧಿಯನ್ನು ಕಠಿಣಗೊಳಿಸುತ್ತವೆ.

ಅರಿವನ್ನು ಮಸುಕಾಗಿ ಮಾಡಿ ನಕಾರಾತ್ಮಕ ಶಕ್ತಿಯ ಮೋಡವನ್ನು ಸೃಷ್ಟಿಸುತ್ತವೆ. ಹೃದಯದಲ್ಲಿ ದ್ವೇಷ, ಹಂಬಲವನ್ನು ಲವಲೇಶ ಉಳಿಯಲು ಬಿಡಬೇಡಿ. ಅದು ಗುಲಾಬಿಯಂತೆ ಮೃದುವಾಗಿದ್ದರೆ ಅದು ಪ್ರಾಣಶಕ್ತಿಯನ್ನು ಹೆಚ್ಚಿಸುತ್ತದೆ.

ಏಕಾಗ್ರತೆ ಮನಸ್ಸನ್ನು ತೀಕ್ಷ್ಣಗೊಳಿಸಿದರೆ ವಿಶ್ರಾಂತಿ ಮನಸ್ಸನ್ನು ವಿಸ್ತಾರಗೊಳಿಸುತ್ತದೆ. ಮನದಲ್ಲಿ ಶರಣಾಗತಿಯ ಭಾವನೆ ಮೂಡಿದರೆ ಸರಳತೆ ಬರುವುದು ತ್ಯಾಗ ಭಾವನೆಯು ನಿಮ್ಮನ್ನು ಪವಿತ್ರಗೊಳಿಸುತ್ತದೆ.

ಉದಾರಭಾವನೆ ಬಂದಾಗ ನಿಮ್ಮ ಬದುಕು ಅನುಕಂಪ ಮತ್ತು ಪ್ರೀತಿಯಿಂದ ಸಮೃದ್ಧವಾಗುತ್ತದೆ. ನಿರ್ಲಿಪ್ತತೆ ಯನ್ನು ತೋರುವುದರಿಂದ ಜೀವನೋತ್ಸಾಹ ಕಳೆದುಹೋಗುವ ಸಾಧ್ಯತೆ ಹೆಚ್ಚು.

ಮನದಲ್ಲಿ ಸದಾ ಚೈತನ್ಯ ತುಂಬಿ, ಸೇವಾ ಮನೋಭಾವನೆ ಬೆಳಸಿ ಪರಿಶುದ್ಧ ಜೀವನ ನಡೆಸುವುದೆ ಉತ್ತಮ ಮಾರ್ಗ.

**"ಪರಿಪೂರ್ಣತೆ ಎಂದರೇನು?"**


ಮತ್ತೊಬ್ಬರನ್ನು ಬದಲಾಯಿಸುವ ಪ್ರಯತ್ನ ಬಿಟ್ಟು ನೀನು ಬದಲಾದರೆ ಅದು ಪರಿಪೂರ್ಣತೆ. ಜನ ಹೇಗಿದ್ದಾರೊ ಹಾಗೆ ಸ್ವೀಕರಿಸಿದರೆ ಅದು ಪರಿಪೂರ್ಣತೆ. ಪ್ರತಿಯೊಬ್ಬರೂ ಅವರ ದಾರಿಯಲ್ಲಿ ಅವರು ಸರಿಯಿದ್ದಾರೆ ಎಂದು ತಿಳಿದರೆ ಅದು ಪರಿಪೂರ್ಣತೆ.

ಎಲ್ಲರೊಂದಿಗೆ ಹೊಂದಾಣಿಕೆಯಿಂದ ನೀನು ಹೊರಟರೆ ಅದು ಪರಿಪೂರ್ಣತೆ. ತಾನು ಮಾಡುವ ಕೆಲಸದಿಂದ ಆತ್ಮವಿಶ್ವಾಸ, ಶಾಂತಿ ಸಿಕ್ಕರೆ ಅದು ಪರಿಪೂರ್ಣತೆ. ನಿನ್ನ ಜಾಣ್ಮೆ ಮತ್ತು ಶಕ್ತಿಯನ್ನು ಪ್ರದರ್ಶಿಸುವುದನ್ನು ಬಿಟ್ಟರೆ ಅದು ಪರಿಪೂರ್ಣತೆ. ಮತ್ತೊಬ್ಬರು ನಿನ್ನನ್ನು ತೆಗಳಿದಾಗ ಅದನ್ನು ಸ್ವೀಕರಿಸುವ ಗುಣವಿದ್ದರೆ ಪರಿಪೂರ್ಣತೆ. ನಿನ್ನನ್ನು ಬೇರೆಯವರೊಂದಿಗೆ ಹೋಲಿಸುವುದನ್ನು ಬಿಟ್ಟರೆ ಅದು ಪರಿಪೂರ್ಣತೆ ಪ್ರತಿಯೊಂದು ವಸ್ತು, ವ್ಯಕ್ತಿ, ವಿಷಯಗಳೊಂದಲೇ ಸುಖ ಸಂತೋಷ ಸಿಗುವುದೆಂಬ ನಂಬಿಕೆಯನ್ನು ಬಿಟ್ಟರೆ ಅದು ಪರಿಪೂರ್ಣತೆ. ನಿನ್ನಲ್ಲಿ ನಿನಗೆ ಭರವಸೆ ಇದ್ದು ಶಾಂತನಾಗಿರಲು ಸಾಧ್ಯವಾದರೆ ಅದು ಪರಿಪೂರ್ಣತೆ.

(ಸಂಗ್ರಹ) – **ಜಾಹ್ನವಿ ಆಚಾರ್ಯ**

"ನಮ್ಮ ನೋವು ನಮಗೆ ಗೊತ್ತಾದರೆ
ನಾವು ಬದುಕಿದ್ದೇವೆ ಎಂದು ಅರ್ಥ
ಪರರ ನೋವು ನಮಗೆ ಗೊತ್ತಾದರೆ
ನಾವು ಮನುಷ್ಯರಾಗಿದ್ದೇವೆ ಎಂದು ಅರ್ಥ"

"ಜಗತ್ತು ನಮ್ಮನ್ನು ನೋಡಲಿ ಎಂಬ
ಆಸೆಯಿಂದ ಪರ್ವತ ಏರುವ ಬದಲು
ನಾವು ಜಗತ್ತನ್ನು ನೋಡುವ
ಇಚ್ಛೆಯಿಂದ ಹತ್ತಬೇಕು"



## ಬೃಂದಾವನ ಗೆಸ್ಟ್ ಹೌಸ್

## BRINDAVANA GUEST HOUSE

*Posh, Homely Veg, P.G. for Ladies & Gents, with all Amenities.*

At No 9, 2nd Cross, 3rd Phase, 5th Block,
Bhuvaneshwari Nagar
BSK 3rd Stage, Bangalore - 560 085
E-mail : rajapanambur@yahoo.co.in

Prop.: **Ashokraj P** - **Mob : 99860 40802**

ವಿ.ಸೂ. : ಎಲ್ಲಾ ಕಡೆಗಳಿಗೆ ಉತ್ತಮ ಸಾರಿಗೆ ಸಂಪರ್ಕ ಹೊಂದಿರುವ ಬನಶಂಕರಿ ಕೇಂದ್ರ ಭಾಗದಲ್ಲಿ ಇರುವ ಎಲ್ಲಾ ಅನುಕೂಲಗಳನ್ನು ಹೊಂದಿರುವ ಸುಸಜ್ಜಿತ ಪೇಯಿಂಗ್‌ಗೆಸ್ಟ್ ಸವಲತ್ತನ್ನು ಆನಂದ ಬಳಗದ ಸದಸ್ಯರು ಪರಿಚಯಿಸುವ ಅತಿಥಿಗಳಿಗೆ ಸೂಕ್ತ ರಿಯಾಯಿತಿ ದರದಲ್ಲಿ ನೀಡಲಾಗುವುದು.



SBI Life INSURANCE

*With best Compliments From :*

**Balakrishna Rao**
*Insurance Advisor*
Code : 16281955

SBI Life Insurance Co. Ltd.

**Member : C H Club**


No.353, "Srikrishna"
17th Main Road, Nandini Layout
Bengaluru - 560 096

For all your Life Insurance needs please contact


Mobile : 93412 42431
81051 86350

Email : bkrao353@gmail.com





## ಬೆಂಗಳೂರಿನಲ್ಲಿ ಜ್ಯೋತಿಷ್ಯ ತರಗತಿ



ಮಂಗಳೂರಿನ ಅನುಭವಿ ಜ್ಯೋತಿಷಿಗಳು ಹಾಗೂ ಜ್ಯೋತಿಷ್ಯ ಶಿಕ್ಷಕರೂ ಆಗಿರುವ ಈ ವಿಠಲ್‌ದಾಸ್ ಭಟ್‌ರವರು ಬೆಂಗಳೂರಿನಲ್ಲಿ ಜ್ಯೋತಿಷ್ಯ ತರಗತಿಗಳನ್ನು ಆರಂಭಿಸಲು ಉದ್ದೇಶಿಸಿದ್ದಾರೆ. ಜಾತಕ ವಿಮರ್ಷೆ, ಜಾತಕ ತಯಾರಿ, ಮುಹೂರ್ತ ನಿಗದಿ, ಮೇಳಾ-ಮೇಳಿ ಇತ್ಯಾದಿ ವಿಷಯಗಳ ಬಗ್ಗೆ ತರಬೇತಿ ನೀಡಲಾಗುವುದು.

ತರಗತಿ ನಡೆಯಲಿರುವ ಸ್ಥಳ :
**ವಾಸವಿ ವಿದ್ಯಾನಿಕೇತನ ಹೈಸ್ಕೂಲ್**
ವಿ.ವಿ. ಪುರಂ, ಬೆಂಗಳೂರು
(ನ್ಯಾಷನಲ್ ಕಾಲೇಜು ಮೆಟ್ರೋ ರೈಲ್ವೇಸ್ಟೇಷನ್ ಹತ್ತಿರ)

ಜ್ಯೋತಿಷ್ಯ ತರಗತಿಯ ಬಗ್ಗೆ ಉಚಿತ ಪ್ರಾತ್ಯಕ್ಷಿಕೆ ಹಾಗೂ ಕಡಿಮೆ ತರಬೇತಿ ವೆಚ್ಚದಲ್ಲಿ ತರಗತಿಗೆ ಸೇರಬಯಸುವವರು.


**ಶ್ರೀ ವಿಠಲ್‌ದಾಸ್ ಭಟ್**
ಮೊ : 8310951005 / 9036728700
ರವರನ್ನು ಸಂಪರ್ಕಿಸಿ, ಈ ತರಗತಿಯ
ಸದುಪಯೋಗವನ್ನು ಪಡೆದುಕೊಳ್ಳಲು ಕೋರಲಾಗಿದೆ.


## ಕವನ ದ್ವಂದ್ವ

ಮಡುಗಟ್ಟಿದ ಭಾವನೆಗಳು
ಹೇಳಲಾಗದ ನೋವುಗಳು
ವಾಸ್ತವ ಮತ್ತು ಕಲ್ಪನೆಗಳ ಹೊಡೆದಾಟ
ದ್ವಂದ್ವ ಬದುಕಿಗೆ ಹೆದರಿ
ದೇವರಿಗೋ, ಧ್ಯಾನಕ್ಕೋ
ಕಣ್ಣಾಮುಚ್ಚಾಲೆಯ ಆಟ

ಭೇಧಿಸಿ ಹೋದರಷ್ಟೇ
ಒಡೆಯುವುದು ಬೀಜ
ಜೀವಿಸುವುದೊಂದೇ ಬದುಕಿನ ರಹದಾರಿ
ಬಿರುಗಾಳಿಗೆ ಸಿಕ್ಕ ತರಗಲೆ ಚೂರಾಗಿದೆ
ನೆಲೆ ನಿಂತದ್ದೇ ಜಾಗ
ಮಣ್ಣಲ್ಲಿ ಮಣ್ಣಾಗಿ ಮರುಜೀವ ಪಡೆಯುವ ತನಕ

**- ಆಶಾ ಎಸ್. ಭಟ್**



# ಪುಸ್ತಕ ಬಿಡುಗಡೆ

ಜನರಲ್ಲಿ ಪುಸ್ತಕ ಓದುವ, ಅದಕ್ಕಿಂತ ಬರೆಯುವ ಹವ್ಯಾಸ ಮರೆಯಾಗುತ್ತಿರುವ ಇಂದು ತನ್ನ ಅರೆಜೀವನವನ್ನು ಪರಪ್ರಾಂತ್ಯಗಳಲ್ಲಿ ಕಳೆದ ಬಳಗದ ಹಿರಿಯ ಸದಸ್ಯರಾದ ಶ್ರೀ ಪಿ.ಎಲ್. ರಾಯರ ಆತ್ಮಕಥೆ 'A Pilgrimage to no where' ಇಂಗ್ಲಿಷ್ ಕೃತಿ ದಿ. 7.7.2019 ರಂದು ನಿವೃತ್ತ CJI ಶ್ರೀ ಎಂ.ಎನ್. ವೆಂಕಟಾಚಲಯ್ಯರವರ ಮುನ್ನುಡಿ ಮತ್ತು ಡಾ॥ ರಾಮಕೃಷ್ಣರವರ ಅಧ್ಯಕ್ಷತೆಯಲ್ಲಿ ಬಿಡುಗಡೆಗೊಂಡಿತು.

ಕೃತಿಯ ಮುಖ್ಯ ಸಂದೇಶ ದೈಹಿಕ ಮಾನಸಿಕ ಆರೋಗ್ಯ. ಪ್ರಾಯ 82ರಲ್ಲಿ ಅವರು ನಿರೋಗಿ, ಔಷಧಿ ರಹಿತರಾಗಿದ್ದರೆ 35ನೆಯ ವಯಸ್ಸಿನಿಂದ ಆರಂಭಿಸಿದ ಜೀವನ ಶೈಲಿ – ಅದರಲ್ಲಿ ಯೋಗ, ದೇಹಪರಿಶ್ರಮ ಮತ್ತು ಶಿಸ್ತೇ ಕಾರಣ. ಇಂತಿದ್ದರೆ ಮಾತ್ರ ಇಂದಿನ ತರುಣರಿಗೆ ರೋಗ ಮುಕ್ತ ವೃದ್ಧಾಪ್ಯ ಸಾಧ್ಯ ಎನ್ನುತ್ತಾರೆ. (ಭೃಗುವಾಣಿ – ಏಪ್ರಿಲ್ 2016).

ಇದಲ್ಲದೆ ಭಾರತದ ಎಲ್ಲಾ ಕಡೆ ಯಾತ್ರೆ (ದಂಡಕಾರಣ್ಯ), ಈಶಾನ್ಯ ಭಾರತ ಟಿಬೇಟ್ (ಕೈಲಾಸ, ಮಾನಸಸರೋವರ), ನೇಪಾಳ ಮತ್ತು ಯುಎಸ್‌ಎನ ಪ್ರವಾಸ, ಟ್ರೆಕಿಂಗ್, ಕಾಶ್ಮೀರ ಕಣಿವೆಯಲ್ಲಿ ಉಗ್ರಗಾಮಿಗಳೊಂದಿಗೆ 2 ವರ್ಷ ಸಂಘರ್ಷ, ಮಾನಸಿಕ ರೋಗಿಗಳಿಗೆ ಕೌನ್ಸಿಲಿಂಗ್ ಎಲ್ಲ ಇವೆ.

ತಾ. 27.10.19ರಂದು ಪೇಜಾವರ ವಿಶ್ವೇಶತೀರ್ಥ ಶ್ರೀಯವರಿಗೆ ಪ್ರತಿಯನ್ನು ಪಾದಕಾಣಿಕೆಯೊಂದಿಗೆ ಕುಟುಂಬ ಸಮೇತರಾಗಿ ಅರ್ಪಿಸಲಾಯಿತು.

ಪ್ರತಿಗಳು ದೊರೆಯುವ ಸ್ಥಳ : www.sapnaonline.com

ರೂ.175/– ಮೊ.: 81539 16450



# ಅಭಿನಂದನೆಗಳು

ಶ್ರೀ ಶ್ರೀನಿವಾಸ ಅಸ್ರಣ್ಣರವರು ಪ್ರತಿಷ್ಠಿತ ಪೀಣ್ಯ ಕೈಗಾರಿಕಾ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ. ಈ ಸಂದರ್ಭದಲ್ಲಿ ಶ್ರೀಯುತರಿಗೆ ಬಳಗದ ಅಭಿನಂದನೆಗಳು.

ಬೆಂಗಳೂರಿನ ಪೀಣ್ಯ ಕೈಗಾರಿಕಾ ಪ್ರದೇಶವು ಸುಮಾರು 10000 ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳನ್ನೊಳಗೊಂಡ ಆಗ್ನೇಯ ಏಷ್ಯಾದಲ್ಲೇ ಬೃಹತ್ತಾದ ಕೈಗಾರಿಕಾ ಸಮುಚ್ಛಯವಾಗಿದೆ. ಈ ಕೈಗಾರಿಕಾ ಪ್ರದೇಶದ ಅತಿ ಸೂಕ್ಷ್ಮ ಇಂಜಿನಿಯರಿಂಗ್ ಸಾಮಾಗ್ರಿಗಳಿಂದ ಹಿಡಿದು ಅತಿ ದೊಡ್ಡದಾದ ಭಾಗಗಳನ್ನೂ ತಯಾರಿಸುವ ಕುಶಲತೆಯುಳ್ಳ ಕೈಗಾರಿಕೆಗಳನ್ನು ಒಳಗೊಂಡಿದೆ. ಈ ಕೈಗಾರಿಕಾ ಪ್ರದೇಶದಲ್ಲಿ ಸುಮಾರು 9 ಲಕ್ಷ ಜನತೆಗೆ ಉದ್ಯೋಗ ಅವಕಾಶ ದೊರಕ್ಕಿರುತ್ತದೆ.

ಖ್ಯಾತ ವೈದ್ಯರಾದ ಡಾ॥ ಐ. ವರದರಾಜ ಅಸ್ರಣ್ಣ ಹಾಗೂ ಶ್ರೀಮತಿ ಹೇಮಲತಾ ಅಸ್ರಣ್ಣ ದಂಪತಿಯ ಸುಪುತ್ರನಾಗಿ ಶ್ರೀಶ್ರೀನಿವಾಸ ಅಸ್ರಣ್ಣರವರು ದಕ್ಷಿಣ ಕನ್ನಡ ಜಿಲ್ಲೆಯ ಕಿನ್ನಿಗೋಳಿಯಲ್ಲಿ ಜನಿಸಿದರು.

ಶ್ರೀಶ್ರೀನಿವಾಸ ಅಸ್ರಣ್ಣರವರು ಬೆಂಗಳೂರಿನ ಪ್ರತಿಷ್ಠಿತ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಅದ್ವಿತ್ ಇಂಡಸ್ಟ್ರೀಸ್ ಹಾಗೂ ಪ್ರೋಗ್ರೆಸಿವ್ ಸಿಸ್ಟಮ್ ಹೆಸರಿನಲ್ಲಿ 2 ಕೈಗಾರಿಕೆಗಳನ್ನು ಸ್ಥಾಪಿಸಿ ನಡೆಸುತ್ತಾ ಬಂದಿರುತ್ತಾರೆ.

## ಅಬಾಕಸ್‌ನಲ್ಲಿ ವಿಶ್ವತಂತ್ರಿಗೆ ದ್ವಿತೀಯ ಸ್ಥಾನ



ಬೆಂಗಳೂರಿನ ಮಾನ್ಯತಾ ಟೆಕ್ ಪಾರ್ಕ್ ಬಳಿಯ ಮನ್‌ಪ್ಲೋ ಸಭಾಂಗಣದಲ್ಲಿ ನಡೆದ 16ನೇ ರಾಜ್ಯಮಟ್ಟದ ಎಸ್.ಐ.ಪಿ. ಅಬಾಕಸ್ ಸ್ಪರ್ಧೆಯಲ್ಲಿ ಹಿಲ್‌ರಾಕ್ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ 4ನೇ ತರಗತಿ ವಿದ್ಯಾರ್ಥಿ ಕು॥ ವಿಶ್ವತಂತ್ರಿ ಬಿ., ದ್ವಿತೀಯ ಸ್ಥಾನ ಪಡೆದಿರುವುದು ಬಳಗಕ್ಕೆ ಹೆಮ್ಮೆಯ ಸಂಗತಿ . ಈ ವಿದ್ಯಾರ್ಥಿ ಪ್ರಖ್ಯಾತ ಸಂಸ್ಕೃತ ವಿದ್ವಾನ್ ತರ್ಕ ಪ್ರವೀಣ ಬೊಮ್ಮರ ಬೆಟ್ಟು ದಿ. ಶ್ರೀನಿವಾಸ ತಂತ್ರಿ ಮತ್ತು ಶ್ರೀಮತಿ ಪುಷ್ಪಾ ತಂತ್ರಿಯವರ ಮೊಮ್ಮಗ ಹಾಗೂ ಬಳಗದ ಸದಸ್ಯ ದಂಪತಿಗಳಾದ ಶ್ರೀ ಮಾಧವ ತಂತ್ರಿ ಮತ್ತು ಶ್ರೀಮತಿ ದೀಪಿಕಾ ತಂತ್ರಿ ಇವರ ಸುಪುತ್ರರಾಗಿದ್ದಾರೆ. ಕು. ವಿಶ್ವತಂತ್ರಿಗೆ ಅಭಿನಂದನೆ.





ಆನಂದ ಬಳಗದ ಸಾರ್ವಜನಿಕ ಸಂಪರ್ಕ ವಿಭಾಗದ ಸಂಚಾಲಕರಾಗಿರುತ ಶ್ರೀ ಕೆ.ಎನ್. ಅಡಿಗ ಅಡೂರು ರವರಿಗೆ ಭಾವನಾತರಂಗ ಟ್ರಸ್ಟ್‌ರವರು ಇತ್ತೀಚೆಗೆ ನಡೆದ ಸಮಾರಂಭವೊಂದರಲ್ಲಿ ಸೇವಾರತ್ನ ಪ್ರಶಸ್ತಿ ನೀಡಿ ಪುರಸ್ಕರಿಸಿದ್ದಾರೆ. ಡಾ. ಅಡಿಗರಿಗೆ ಅಭಿನಂದನೆ.

## ಜಯಪ್ರಕಾಶ್‌ರಾವ್ ಅವರಿಗೆ ಸನ್ಮಾನ



ಬಳಗದ ಸಕ್ರಿಯ ಸದಸ್ಯರಾಗಿರುವ ಶ್ರೀ ಕೆ. ಜಯಪ್ರಕಾಶ್ ರಾವ್ ರವರನ್ನು ಮೈಸೂರಿನ ಕೆ.ಇ.ಬಿ. ಎಂಪ್ಲಾಯೀಸ್ ಎಸೋಸಿಯೇಷನ್ ರವರು ಕನ್ನಡ ರಾಜ್ಯೋತ್ಸವ ಆಚರಣೆಯ ಸಂದರ್ಭದಲ್ಲಿ ಸನ್ಮಾನಿಸಿರುತ್ತಾರೆ. ಶ್ರೀ ಜಯಪ್ರಕಾಶ್ ರಾವ್ ರವರು ಖ್ಯಾತ ಪತ್ರಿಕೋದ್ಯಮಿಯಾಗಿದ್ದು, ಸಾರ್ವಜನಿಕ ಸಂಪರ್ಕ ಕ್ಷೇತ್ರದಲ್ಲಿ ಪರಿಚಿತರಾಗಿದ್ದಾರೆ. ವೃತ್ತಿ ಜೀವನ ಪ್ರಾರಂಭಿಕ ಹಂತದಲ್ಲಿ ಉದಯವಾಣಿಯಲ್ಲಿ ಪತ್ರಕರ್ತರಾಗಿದ್ದು, ಆಮೇಲೆ ಜೀವವಿಮಾ ನಿಗಮ, ಸಿಂಡಿಕೇಟ್ ಬ್ಯಾಂಕ್, ಕೇಂದ್ರ ಸರ್ಕಾರದ ಎ.ಡಿ.ಎ.ದಲ್ಲಿ ಸೇವೆ ಸಲ್ಲಿಸಿರುತ್ತಾರೆ. ಬೆಂಗಳೂರಿನ ಡಿ.ಆರ್.ಡಿ.ಒ. ದಲ್ಲಿ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಯಾಗಿಯೂ ಸೇವೆ ಸಲ್ಲಿಸಿದ್ದ ಶ್ರೀಯುತರು ಮಾಜಿ ರಾಷ್ಟ್ರಪತಿ ಡಾ. ಅಬ್ದುಲ್ ಕಲಾಂ ರವರ ಜೀವನಕಥೆಯ ಕನ್ನಡ ಭಾಷಾಂತರ 'ಅಗ್ನಿಯ ರೆಕ್ಕೆಗಳು' ಕೃತಿಯನ್ನು ರಚಿಸಿದ್ದು ಈ ಪುಸ್ತಕವನ್ನು 14 ಸಾರಿ ಮರುಮುದ್ರಣ ಮಾಡಲಾಗಿದೆ. ಕಳೆದ ವರ್ಷ ಬರೆದ ಡಾ. ಕಲಾಂ ಜೀವನಧರ್ಮ ಪುಸ್ತಕವೂ ಒಂದು ವರ್ಷದಲ್ಲಿ ಮೂರು ಮುದ್ರಣಕಂಡ ಜನಪ್ರಿಯ ಕೃತಿಯಾಗಿದೆ. ಸುಮಾರು 14 ದೇಶಗಳಲ್ಲಿ ವಿವಿಧ ಸಭೆ–ಸಮ್ಮೇಳನಗಳಲ್ಲಿ ಪಾಲ್ಗೊಂಡ ಶ್ರೀ ಜಯಪ್ರಕಾಶ್ ರಾವ್ 600ಕ್ಕಿಂತಲೂ ಹೆಚ್ಚು ಪರ್ಸನಾಲಿಟಿ ಡೆವೆಲಪ್‌ಮೆಂಟ್ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದು, ಈ ಕ್ಷೇತ್ರದಲ್ಲಿ ಬಹಳ ಬೇಡಿಕೆಯ ಸಂಪನ್ಮೂಲ ವ್ಯಕ್ತಿಯಾಗಿದ್ದಾರೆ.

## ಸಾಧಕರಿಗೆ ಸನ್ಮಾನ



ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ತಾ 5.11.19 ರಂದು ನಡೆದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ ನೀಡಿರುವ 5 ಖ್ಯಾತ ವೈದ್ಯ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಿತು. ಇವರ ಪೈಕಿ, ವಿಜಯವಾಣಿ ಪತ್ರಿಕೆಯ ಖ್ಯಾತ ಅಂಕಣಕಾರರೂ ಇದುವರೆಗೆ 15 ಜನಪ್ರಿಯ ಪುಸ್ತಕಗಳನ್ನು 300 ಲೇಖನಗಳನ್ನೂ ಬರೆದಿರುವ ಡಾ॥ ಕೆ.ಪಿ. ಪುತ್ತೂರಾಯರು ಒಬ್ಬರು ಎಂಬುವುದು ಸಂತಸದ ವಿಚಾರ.

# ಸುದ್ದಿ - ಸಂಗ್ರಹ

ಶಿವಳ್ಳಿ ಬ್ರಾಹ್ಮಣರ ಪ್ರಥಮ ವಿಶ್ವ ಸಮ್ಮೇಳನವು ಉಡುಪಿ ಶ್ರೀಕೃಷ್ಣ ಮಠದ ರಾಜಾಂಗಣದಲ್ಲಿ ತಾ.13.12.19 ರಿಂದ 15.12.19ರವರೆಗೆ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ದೇಶ ವಿದೇಶಗಳಿಂದ 3000ಕ್ಕೂ ಮಿಕ್ಕಿ ಶಿವಳ್ಳಿ ಬ್ರಾಹ್ಮಣರು ಭಾಗವಹಿಸಿದ್ದರು. ನಮ್ಮ ಶಿವಳ್ಳಿ ಬ್ರಾಹ್ಮಣ ಸಮಾಜದ ಎಲ್ಲಾ ಸ್ವಾಮೀಜಿಗಳು ಬಂದು ಆಶೀರ್ವಚನ ನೀಡಿದ್ದಲ್ಲದೆ, ನಮ್ಮ ಸಮಾಜದ ಹಲವಾರು



ಗಣ್ಯರನ್ನು, ಪ್ರತಿಭಾವಂತರನ್ನು ಸನ್ಮಾನಿಸಲಾಯಿತು. ಹಲವಾರು ಸಮಾವೇಶಗಳು ನಡೆದುವು. ನಮ್ಮ ಆನಂದ ಬಳಗದ ಶ್ರೀ ರಾಮಚಂದ್ರ ಉಪಾಧ್ಯ, ಉದ್ಯಮಿ ರಾಮದಾಸ್, ಕಾರ್ಯದರ್ಶಿ ಹರಿದಾಸ್ ಉಪಾಧ್ಯಾಯ ಹೀಗೆ ಹಲವಾರು ಸದಸ್ಯರು ಆಗಮಿಸಿದ್ದರು. ಮಾನ್ಯ ಡಾ॥ ಕೆ.ಪಿ. ಪುತ್ತೂರಾಯರು ಅರ್ಥಪೂರ್ಣವಾದ ಸಮಾರೋಪ ಭಾಷಣವನ್ನು ಮಾಡಿದರು. ಪೇಜಾವರ ಮಠದ ಶ್ರೀ ಶ್ರೀ ವಿಶ್ವೇಶತೀರ್ಥರು, ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥರು, ಕುಕ್ಕೆ ಶ್ರೀ ಸುಬ್ರಹ್ಮಣ್ಯ ಮಠದ ಸ್ವಾಮೀಜಿಗಳು ಆಶೀರ್ವಚನ ನೀಡಿದರು. ಪರ್ಯಾಯ ಶ್ರೀ ಪಲಿಮಾರು ಮಠಾಧೀಶರಾದ ಪುಟ್ಟ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಸ್ವಾಮೀಜಿಯವರ ಆತಿಥ್ಯ ಹೃದಯಂಗಮವಾಗಿತ್ತು.

**– ಡಾ॥ ಕೆ.ಪಿ. ಪುತ್ತೂರಾಯ**


## ಶುಭ ವಿವಾಹ

- ಬಳಗದ ಸದಸ್ಯರಾದ ಶ್ರೀ ದೀಪಕ್ ಎಸ್.ರಾವ್ (ದಿ.ಕೆ. ಶ್ರೀನಿವಾಸರಾವ್ ಹಾಗೂ ಶ್ರೀಮತಿ ವಾರಿಜ ರಾವ್ ರವರ ಸುಪುತ್ರ) ರವರ ವಿವಾಹ ಶ್ರೀಮತಿ ಜಯಂತಿ ಮತ್ತು ಶ್ರೀ ರಾಮಮೂರ್ತಿ ಉಡುಪರ ಪುತ್ರಿ ಸೌ. ಅಶ್ವಿನಿ ಆರ್ ಎಂಬ ವಧುವಿನ ಜೊತೆ ದಿ.10.10.2019 ರಂದು ಉಜರೆಯಲ್ಲಿರುವ ಶ್ರೀ ಜನಾರ್ದನ ಸ್ವಾಮಿ ದೇವಸ್ಥಾನದ ಶ್ರೀ ರಾಮಕೃಷ್ಣ ಸಭಾ ಮಂಟಪದಲ್ಲಿ ಅದ್ದೂರಿಯಿಂದ ಜರಗಿದೆ.

- ಬಳಗದ ಸಕ್ರಿಯ ಸದಸ್ಯರಾಗಿರುವ ಶ್ರೀ ಸುರೇಶ್ ಭಟ್ ಕೋಟೇಶ್ವರ ಮತ್ತು ಶ್ರೀಮತಿ ರೇವತಿಯವರ ಸುಪುತ್ರಿ ಚಿ॥ ಸೌ॥ ಮಹಿಮಾ ಎಂಬ ವಧುವಿನ ವಿವಾಹ ದಿ. 11.12.2019ರಂದು ಶ್ರೀಮತಿ ಗಾಯತ್ರಿ ಮತ್ತು ಶ್ರೀ ಟಿ.ಕೆ. ನರೇಶ್‌ರವರ ಪುತ್ರ ಚಿ॥ ಫಲ್ಗುಣ ಎನ್. ಉಪಾಧ್ಯಾಯ ಎಂಬ ವರನೊಡನೆ ಬೆಂಗಳೂರಿನ ಶಂಕರ ಫೌಂಡೇಶನ್‌ನಲ್ಲಿ ವಿಜೃಂಭಣೆಯಿಂದ ನೆರವೇರಿದೆ.

- ಬಳಗದ ಹಿರಿಯ ಸದಸ್ಯ ಭೃಗುವಾಣಿಯ ಅಂಕಣಕಾರರಾದ ಶ್ರೀ ಹಂದಾಡಿ ಸತ್ಯನಾರಾಯಣ ರಾವು (ಹಂಸ) ಅವರ ಸಹೋದರ ವಿಜಯವಾಡದಲ್ಲಿ ವಾಸ್ತವ್ಯವಿರುವ ಶ್ರೀ ಹಂದಾಡಿ ವೆಂಕಟ ರಮಣರಾವು ದಂಪತಿಗಳ ಪುತ್ರಿ ಸೌ. ವಂದನಾರವರ ಮದುವೆ ಉಯ್ಯೂರು ವಾಲೇಶ್ವರ ರಾವು ದಂಪತಿಗಳ ಪುತ್ರ ಚಿ. ಸಾಯಿಕುಮಾರ್ ಜೊತೆ ದಿ.12.12.2019 ರಂದು ತಿರುಮಲದಲ್ಲಿ ವಿಜೃಂಭಣೆಯಿಂದ ನೆರವೇರಿದೆ.


## ಭಾವಪೂರ್ಣ ಶ್ರದ್ಧಾಂಜಲಿ



### ಎಸ್.ಡಿ. ಪೆಜತ್ತಾಯ

ಪ್ರಸಿದ್ಧ ತುಳು ಸಾಹಿತಿ ಹಾಗೂ ಸಾಮಾಜಿಕ ಮತ್ತು ಧಾರ್ಮಿಕ ಸಂಘಟಕರಾಗಿದ್ದ ಶ್ರೀ ಶ್ರೀನಿವಾಸ ದೇವೇಂದ್ರ ಪೆಜತ್ತಾಯರವರು ದಿ. 28.9.2019 ರಂದು ನಿಧನರಾಗಿದ್ದಾರೆ. ಸಿಂಡಿಕೇಟ್ ಬ್ಯಾಂಕಿನಲ್ಲಿ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿ, ನಿವೃತ್ತರಾದ ಶ್ರೀಯುತರು ತುಳು ಹಾಗೂ ಕನ್ನಡ ಭಾಷೆಯಲ್ಲಿ ಹಲವಾರು ಕೃತಿಗಳನ್ನು ರಚಿಸಿ, ಪ್ರಸಿದ್ಧ ಸಂಸ್ಥೆಗಳಿಂದ ಅನೇಕ ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಮುನಿ ಶ್ರೇಷ್ಠರಾದ ಶ್ರೀ ವಾದಿರಾಜ ಸ್ವಾಮಿಯವರು ರಚಿಸಿರುವ ಶ್ರೀ ಲಕ್ಷ್ಮೀ ಶೋಭಾನೆಯನ್ನು ತುಳು ಭಾಷೆಗೆ ಅನುವಾದ ಮಾಡಿರುವ ಶ್ರೀ ಪೆಜತ್ತಾಯರವರು ವಿವಿಧ ಕಥೆಗಳು, ಹಾಡುಗಳು ಮತ್ತು ಭಕ್ತಿ ಗೀತೆಗಳನ್ನು ರಚಿಸಿ, ಸಾರಸ್ವತ, ಧಾರ್ಮಿಕ ಮತ್ತು ಆಧ್ಯಾತ್ಮ ಪ್ರಪಂಚಕ್ಕೆ ಗಣನೀಯ ಸೇವೆ ಸಲ್ಲಿಸಿರುತ್ತಾರೆ. ತಮ್ಮ 88ನೇ ವಯಸ್ಸಿನಲ್ಲಿ ನಿಧನರಾದ ಶ್ರೀ ಎಸ್.ಡಿ. ಪೆಜತ್ತಾಯರವರಿಗೆ ನಮ್ಮ ಶ್ರದ್ಧಾಂಜಲಿ.

### ಕೋಟೇಶ್ವರ ಸೂರ್ಯನಾರಾಯಣ ರಾವ್



ಆನಂದ ಬಳಗ ಹಿರಿಯ ಪೋಷಕರು ಹಾಗೂ ಭೃಗುವಾಣಿಯ ಪ್ರತಿ ಸಂಚಿಕೆಗೂ ತಮ್ಮ ಲೇಖನ, ಹಾಡು, ಪ್ರವಾಸ ಕಥನ ಮತ್ತಿತರ ವಿಶೇಷ ಲೇಖನಗಳನ್ನು ನೀಡುತ್ತಿದ್ದ ನಾಡಿನ ಪ್ರಸಿದ್ಧ ಸಾಹಿತಿ, ಅಂಕಣಕಾರ, ಕೊಡುಗೈ ದಾನಿ, ಅಗ್ರಗಣ್ಯ ಸಮಾಜ ಸೇವಕರಾದ ಶ್ರೀ ಕೋಟೇಶ್ವರ ಸೂರ್ಯ ನಾರಾಯಣ ರಾವ್‌ರವರು ದಿ. 12.12.2019 ರಂದು ವಾಹನ ಅಪಘಾತದಲ್ಲಿ ನಿಧನರಾಗಿರುವುದು ಅತ್ಯಂತ ಬೇಸರದ ವಿಚಾರ. ತಮ್ಮ ದೀರ್ಘಕಾಲದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ಆಧ್ಯಾತ್ಮಿಕ ಸೇವೆಗೆ ಅನೇಕ ಪ್ರಶಸ್ತಿ – ಗೌರವಗಳನ್ನು ಪಡೆದಿರುವ ಶ್ರೀಯುತರು ಬೆಂಗಳೂರಿನಲ್ಲಿ ಮಹಾಲಕ್ಷ್ಮಿ ಫ್ಯಾನ್ಸಿ ಸ್ಟೋರ್ಸ್ ಎಂಬ ಉದ್ಯಮವನ್ನು ಕೆಲವಾರು ದಶಕಗಳಿಂದ ನಡೆಸಿಕೊಂಡು ಬಂದಿದ್ದು ಯಶಸ್ವಿ ಉದ್ಯಮಿಯೂ ಆಗಿದ್ದರು. ತನ್ನ 82ನೇ ವಯಸ್ಸಿನಲ್ಲಿ ನಿಧನರಾದ ಶ್ರೀ ಕೋಟೇಶ್ವರ ಸೂರ್ಯನಾರಾಯಣ ರಾವ್‌ರವರಿಗೆ ಭೃಗುವಾಣಿಯ ಭಾವಪೂರ್ಣ ಶ್ರದ್ಧಾಂಜಲಿ.

### ಕೆ. ಸದಾಶಿವರಾವ್

ಬಳಗದ ಹಿರಿಯ ಸದಸ್ಯ, ಉತ್ಸಾಹೀ ಸಂಘಟನಾಕಾರ ಕೆ. ಸದಾಶಿವರಾವ್‌ರವರು ದಿನಾಂಕ 12.10.2019ರಂದು ನಿಧನರಾಗಿದ್ದಾರೆ. ದಿವಂಗತರ ಆತ್ಮಕ್ಕೆ ಸದ್ಗತಿ ಲಭಿಸಲಿ ಎಂದು ದೇವರಲ್ಲಿ ಪ್ರಾರ್ಥನೆ.

### ಪರಸ್ಪರ : ಪ್ರದರ್ಶನ – ಪರಿಚಯ

ಬಳಗದ ಅನೇಕ ಸದಸ್ಯರು ಹಲವಾರು ಉತ್ಪನ್ನಗಳನ್ನು ತಯಾರಿಸುವ ಉದ್ಯಮಗಳನ್ನು ಹೊಂದಿದ್ದಲ್ಲದೆ, ವಿವಿಧ ರೀತಿಯ ವೃತ್ತಿಪರ ಸೇವೆಗಳನ್ನು ಒದಗಿಸುತ್ತಿದ್ದಾರೆ. ಸದಸ್ಯರು ಒದಗಿಸುತ್ತಿರುವ ಉತ್ಪನ್ನ ಮತ್ತು ಸೇವೆಗಳನ್ನು ಸದಸ್ಯರಿಗೆ ಪರಿಚಯಿಸುವ ಸದುದ್ದೇಶದಿಂದ ಆನಂದ ಬಳಗವು ವಾರ್ಷಿಕೋತ್ಸವದ ಸಂದರ್ಭದಲ್ಲಿ "ಪರಸ್ಪರ ಎಂಬ ಪ್ರದರ್ಶನ – ಪರಿಚಯ ಕಾರ್ಯಕ್ರಮವನ್ನು ಕಳೆದ ಕೆಲವು ವರ್ಷಗಳಿಂದ ಹಮ್ಮಿಕೊಂಡು ಬಂದಿದೆ. ದಿನಾಂಕ 01.3.2020 ರಂದು ನಡೆಯಲಿರುವ ಬಳಗದ ವಾರ್ಷಿಕೋತ್ಸವದ ಸಂದರ್ಭದಲ್ಲಿ ಹೋಟೆಲ್ ಉಡ್‌ಲ್ಯಾಂಡ್ಸ್‌ನ ಆವರಣದಲ್ಲಿ ಸಂಜೆ 3 ರಿಂದ "ಪರಸ್ಪರ–2020" ಕಾರ್ಯಕ್ರಮವನ್ನು ಯುವ ವಿಭಾಗದ ನೇತೃತ್ವದಲ್ಲಿ ಸಂಯೋಜಿಸಲಾಗಿದೆ. ಈ ಅವಕಾಶದ ಲಾಭವನ್ನು ಪಡೆಯಲು ಆಸಕ್ತಿ ಇರುವ ಸದಸ್ಯರು ಯುವ ವಿಭಾಗದ ಸಂಚಾಲಕರಾದ ಶ್ರೀ ಎಂ. ಕೃಷ್ಣಪ್ರಸಾದ್ (9845018183) ಇವರನ್ನು ಸಂಪರ್ಕಿಸಿ ಹೆಸರು ನೋಂದಾಯಿಸಬೇಕಾಗಿ ಕೋರಿಕೆ.


## ಭೃಗುವಾಣಿಯಲ್ಲಿ ಜಾಹೀರಾತಿಗಾಗಿ ಮನವಿ

ಭೃಗುವಾಣಿ ತ್ರೈಮಾಸಿಕ ಪತ್ರಿಕೆಯು, ಆನಂದ ಬಳಗದ ಸುಮಾರು 2000 ಸದಸ್ಯರಿಗೆ ತಲುಪುತ್ತಿದೆ. ಹಾಗೂ ಇತರ ಪ್ರಮುಖ ಸಂಘ–ಸಂಸ್ಥೆಗಳಿಗೂ ಕಳುಹಿಸಲಾಗುತ್ತಿದೆ. ಅಂದರೆ ಭೃಗುವಾಣಿಯ ಒಟ್ಟಾರೆ ಸಂಖ್ಯೆ ಸುಮಾರು 10 ಸಾವಿರದಷ್ಟಿದ್ದು, ಈ ಪತ್ರಿಕೆ ತಮ್ಮ ಉತ್ಪನ್ನಗಳನ್ನು ಮತ್ತು ಸೇವೆಗಳನ್ನು ಪರಿಚಯಿಸಲು ಪ್ರಭಾವಶಾಲಿಯಾದ ಹಾಗೂ ಪರಿಣಾಮಕಾರಿಯದ ಮಾಧ್ಯಮ.

| ಜಾಹೀರಾತು ದರಗಳು (ಪ್ರತಿ ಸಂಚಿಕೆಗೆ) | | |
|---|---|---|
| 2, 3 ಮತ್ತು ಹಿಂಬದಿ ಬಹುವರ್ಣ ರಕ್ಷಾಪುಟ | : | ರೂ.3,000/– |
| ಬಹುವರ್ಣ – ಒಳಪುಟ | : | ರೂ.2,000/– |
| ಕಪ್ಪು ಬಿಳುಪು – ಒಳಪುಟ | : | ರೂ.1,500/– |
| ಅರ್ಧಪುಟ | : | ರೂ.750/– |
| ಕಾಲುಪುಟ | : | ರೂ.400/– |

ಜಾಹೀರಾತು ನೀಡಿ ಪ್ರೋತ್ಸಾಹಿಸಲು ಆಸಕ್ತಿಯುಳ್ಳವರು ಸಂಪರ್ಕಿಸಬೇಕಾದ ವಿಳಾಸ :

**ಶ್ರೀ ವೈ. ರಾಧಾಕೃಷ್ಣ**
ಕೋಶಾಧಿಕಾರಿ, ಆನಂದ ಬಳಗ (98440 58851)

**ಶ್ರೀ ಬಿ.ಎಸ್. ಬಾಲಚಂದ್ರ ತೋಳ್ಪಾಡಿ**
ಜೊತೆ ಕೋಶಾಧಿಕಾರಿ, ಆನಂದ ಬಳಗ (94481 34268)

# ಆನಂದ ಬಳಗ ಮತ್ತು ಪೂಜ್ಯ ಪೇಜಾವರ ಶ್ರೀಗಳು

**ಆನಂದ ಬಳಗವನ್ನು ದಿ. 10.4.1988 ರಂದು ಉದ್ಘಾಟಿಸಿ, ಅನುಗ್ರಹಿಸಿದ ಪೂಜ್ಯ ವಿಶ್ವೇಶತೀರ್ಥ ಶ್ರೀಪಾದರು ಆನಂತರ ಸಂದರ್ಭ ಸಿಕ್ಕಿದಾಗಲೆಲ್ಲಾ ಬಳಗದ ಕಾರ್ಯಕ್ರಮಗಳಲ್ಲಿ ಅತ್ಯಂತ ಅಭಿಮಾನದಿಂದ ಪಾಲ್ಗೊಂಡು ಆಶೀರ್ವದಿಸುತ್ತಾ ಇದ್ದದ್ದು ಬಳಗದ ಪುಣ್ಯ ವಿಶೇಷ. ಇಲ್ಲಿದೆ -ಪೂಜ್ಯ ಶ್ರೀಪಾದರಿಗೆ ಭಕ್ತಿಪೂರ್ವಕ ಚಿತ್ರನಮನ.**



ಬಳಗದ ದ್ವಿತೀಯ ವಾರ್ಷಿಕೋತ್ಸವದಲ್ಲಿ
ಸ್ವಾಮೀಜಿಯವರಿಗೆ ತುಲಾಭಾರ



ಪೂಜ್ಯ ಶ್ರೀಗಳಿಂದ ಡಾ.ಪಿ.ಜೆ. ಬಾಗಿಲ್ತಾಯರವರಿಗೆ
ಆಶೀರ್ವಾದ



ಗಣೇಶೋತ್ಸವದಲ್ಲಿ
ಶ್ರೀಪಾದರಿಂದ ಅನುಗ್ರಹ ವಚನ



ಆನಂದ ಸಭಾಗೃಹದ ಉದ್ಘಾಟನೆ
ಸ್ವಾಮೀಜಿಯವರಿಂದ




ಬಳಗದ ರಜತ ಮಹೋತ್ಸವದಲ್ಲಿ
ಪೂಜ್ಯ ಶ್ರೀಗಳು



ಶ್ರೀ ದುರ್ಗಾ ನಮಸ್ಕಾರ
ಸ್ವಾಮೀಜಿಯವರಿಂದ ಮಹಾಮಂಗಳಾರತಿ

# ಪೂಜ್ಯ ವಿಶ್ವೇಶತೀರ್ಥರ ವಿಶ್ವರೂಪ



ದಾಖಲೆಯ ಪಂಚಮ ಪರ್ಯಾಯ



ಸರ್ವಜ್ಞಪೀಠದಲ್ಲಿ ಕೃಷ್ಣ ಕೈಂಕರ್ಯ



ರಾಷ್ಟ್ರಪತಿಗಳಿಗೆ ಸನ್ಮಾನ



ಪ್ರಧಾನಿ ಮೋದಿಯೊಂದಿಗೆ ಗಹನ ಚರ್ಚೆ



ರಾಜರ್ಷಿ ಡಾ. ವಿರೇಂದ್ರ ಹೆಗ್ಗಡೆಯವರೊಂದಿಗೆ



ಸಿದ್ಧಗಂಗಾ ಮಠದ ಸ್ವಾಮೀಜಿಯವರೊಂದಿಗೆ



ಹರಿಪಾದ ಸೇರಿದ ವಿಶ್ವ ಸಂತನಿಗೆ ರಾಷ್ಟ್ರಗೌರವ



ತಪಃ ಸ್ವಾಧ್ಯಾಯ ಶುಶ್ರೂಷಾ ಕೃಷ್ಣ ಪೂಜಾ
ರತಂ ಮುನಿಮ್ । ವಿಶ್ವೇಶ ಮಿಷ್ಟದಂ ವಂದೇ ।
ಪರಿವ್ರಾಟ್ - ಚಕ್ರವರ್ತಿನಮ್ ॥

# ಆನಂದ ಬಳಗ (ರಿ.), ಬೆಂಗಳೂರು

22ಎ, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560 001

ಆತ್ಮೀಯರೇ,

ನಮ್ಮ ಬಳಗದ

## 32ನೇ ವಾರ್ಷಿಕೋತ್ಸವ

ದಿನಾಂಕ 01–3–2020ರ ಭಾನುವಾರ ಸಂಜೆ 4.25ರಿಂದ ಬೆಂಗಳೂರು ರಾಜಾರಾಂ ಮೋಹನ್ ರಾಯ್ ರಸ್ತೆಯಲ್ಲಿರುವ ಹೋಟೆಲ್ ಉಡ್‌ಲ್ಯಾಂಡ್ಸ್‌ನ ಶ್ರೀ ಕೃಷ್ಣ ಸಭಾಂಗಣದಲ್ಲಿ ನಡೆಯಲಿದೆ.

**ಶ್ರೀ ತೇಜಸ್ವಿ ಸೂರ್ಯ**
ಸನ್ಮಾನ್ಯ ಲೋಕಸಭಾ ಸದಸ್ಯರು, ಬೆಂಗಳೂರು ದಕ್ಷಿಣ ಕ್ಷೇತ್ರ
ಇವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಈ ಸಮಾರಂಭದಲ್ಲಿ

**ಶ್ರೀ ಪಿ.ಸಿ. ಮುಕುಂದರಾವ್**
ಜನಪ್ರಿಯ ಯೋಗ ಗುರು ಮತ್ತು
ಸಮಾಜ ಹಿತಚಿಂತಕರು

ಮತ್ತು

**ಶ್ರೀ ಗಂಜೀಫಾ ರಘುಪತಿ ಭಟ್**
ಪ್ರಖ್ಯಾತ ಗಂಜೀಫಾ ಚಿತ್ರಕಲಾವಿದರು

ಇವರನ್ನು **"ಆನಂದ ಸಮಾಜ ಭೂಷಣ"** ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು.

ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಸಮಾರಂಭದ ಸಂಭ್ರಮದಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ

---

**ಶ್ರೀಮತಿ ಗೀತಾ ವಾಸುದೇವರಾವ್**
ಅಧ್ಯಕ್ಷರು

**ಎಸ್. ಹರಿದಾಸ ಉಪಾಧ್ಯ**
ಕಾರ್ಯದರ್ಶಿ

**ಶ್ರೀಮತಿ ರತ್ನಕಲಾ ಮಡಿ**
ಅಧ್ಯಕ್ಷರು, ಮಹಿಳಾ ವಿಭಾಗ

## ಕಾರ್ಯಕ್ರಮ

ಸಂಜೆ 3.00 : "ಪರಸ್ಪರ–2020" ಉದ್ಘಾಟನೆ
ಸಂಜೆ 4.00 : ಲಘು ಉಪಾಹಾರ
ಸಂಜೆ 4.25 : ಸಾಂಸ್ಕೃತಿಕ ಕಾರ್ಯಕ್ರಮ

❋ ಝೀ–ಕನ್ನಡ ಟಿವಿ ವಾಹಿನಿಯ ಸರಿಗಮಪ
❋ ಸೀಸನ್ 15 ರ ವಿಜೇತರಾದ ಶ್ರೀ ಕೀರ್ತನ್
❋ ಹೊಳ್ಳ ಮತ್ತು ವೃಂದದವರಿಂದ ಭಕ್ತಿ ಸಂಗೀತ

---

ಸಂಜೆ 6.00 : ಸಭಾ ಕಾರ್ಯಕ್ರಮ
ಪ್ರಾರ್ಥನೆ, ಸ್ವಾಗತ ಭಾಷಣ, ವಾರ್ಷಿಕ ವರದಿ ವಾಚನ, ಪ್ರಶಸ್ತಿ ಪ್ರದಾನ ಮತ್ತು ಸನ್ಮಾನಿತರ ಅನಿಸಿಕೆ, ಮುಖ್ಯ ಅತಿಥಿಗಳ ಮಾತು, ಅಧ್ಯಕ್ಷರ ಭಾಷಣ, ವಂದನಾರ್ಪಣೆ

---

ರಾತ್ರಿ 8.00 ಗಂಟೆಗೆ : ಭೋಜನ
(ಸೌಜನ್ಯ : ಶ್ರೀ ಕೆ. ವಾಸುದೇವರಾವ್ ಮತ್ತು ಶ್ರೀಮತಿ ಗೀತಾ ವಾಸುದೇವರಾವ್
ಮಾಲಿಕರು, ಹೋಟೆಲ್ ಉಡ್‌ಲ್ಯಾಂಡ್ಸ್)

ಹಾರ್ದಿಕ ಶುಭಾಶಯಗಳೊಂದಿಗೆ

ಹೋಟೆಲ್ ಅಜಂತಾ ಆತಿಥ್ಯಸೇವಾ ಸಮೂಹ

**HOTEL AJANTHA GROUP OF HOSPITALITY SERVICES**

# HOTEL AJANTHA

***A Boarding and Lodging Hotel of repute with spacious place for parking Party Halls and All facilities***

No. 22/A, Mahatma Gandhi Road, Bangalore-560 001
Phone : 25584321 Fax : 080-25584780
Email : bagilthaya@vsnl.com

## AJANTHA TRINITY INN

***Luxurious Rooms for Comfortable Stay***

Trinity Circle, Mahatma Gandhi Road
Bangalore-560 001

Phone : 25559491 - 5 lines

**YOUR SATISFACTION - OUR MOTTO**

ನಿಮ್ಮ ಸಂತೃಪ್ತಿಯೇ ನಮ್ಮ ಧ್ಯೇಯ

*With best compliments*

# FIRETECH
## BOILERS PRIVATE LTD.
(An ISO 9001 : 2015 Certified Company)

**Office:** "FIRETECH HOUSE" , No. 211, 2nd Cross, 38th Main, B.T.M Layout, 2nd Stage, Bangalore - 560 068, Karnataka. Ph.: 080-26683686 / 26683921, Mob. : 73384 87934

**Works:** 121/C2,Bommasandra Industrial Area, Anekal Taluk, Bangalore - 560 099, Karnataka. Ph.: 080-27834189

E-mail : firetechhouse@gmail.com Website : www.firetechboilers.com

## Manufacturing Steam Boilers (IBR & Non IBR)

- Thermic Fluid Heaters
- Hot Air Generators
- Waste Heat Boilers
- Agro Dryers





- Heat Exchanger
- MDC
- Accumulator etc.,





# ನೆಚ್ಚಿನ ಕುಟುಂಬಕ್ಕಾಗಿ, ಬೆಚ್ಚನೆಯ ಮನೆ, ಆರಾಮದಾಯಕ ಕಾರು.

ಕೆಬಿಎಲ್ ಅಪ್ನಾ ಘರ್ **ಮತ್ತು** ಕೆಬಿಎಲ್ ಕಾರು ಲೋನ್

**ಆಕರ್ಷಕ ಬಡ್ಡಿದರ**



**ಸಾರ್ವಜನಿಕರಿಗೆ ಬ್ಯಾಂಕಿಂಗ್ ಸುರಕ್ಷೆಯ ಸಂದೇಶ**

ಯಾವುದೇ ವ್ಯಕ್ತಿ / ಸಾರ್ವಜನಿಕರ / ಟ್ರಸ್ಟ್ ಖಾತೆಗಳನ್ನು ಮತ್ತು ನಿಧಿಗಳನ್ನು ಆರ್‌ಬಿಐ ಇರಿಸಿಕೊಳ್ಳುವುದಿಲ್ಲ,
ನಿಮಗೆ ಕೊಡುಗೆಗಳು ಬಂದಿವೆ ಅಂತ ಆರ್‌ಬಿಐ ಹೆಸರನಲ್ಲಿ ಯಾವುದೇ ದೂರವಾಣಿ ಅಥವಾ ಇ-ಮೇಲ್ ಬಂದರೆ ಅವುಗಳಿಗೆ ಮೋಸ ಹೋಗಬೇಡಿ.

ಹೆಚ್ಚಿನ ವಿವರಗಳಿಗಾಗಿ ನಿಮ್ಮ ಹತ್ತಿರದ ನಮ್ಮ ಬ್ಯಾಂಕ್ ಶಾಖೆಯನ್ನು ಸಂಪರ್ಕಿಸಿ
ಅಥವಾ ಟೋಲ್ ಫ್ರೀ ಸಂಖ್ಯೆ : **1800 425 1444** ಗೆ ಕರೆ ಮಾಡಿ. Follow us on / karnatakabank

## ಕರ್ಣಾಟಕ ಬ್ಯಾಂಕ್

ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com

# FRIDGE HOUSE

Distributor & Dealer for

**HAVELLS Brand (Lloyd) AC's & CARRIER MIDEA Air Conditioners**



Tower AC




Split AC



Cassette AC



Window AC



Ductable AC

**Contact Persons: Mr. M K Prasad & Mr. B Krishnaswamy – M: 9845330571**

# FRIDGE HOUSE

FRIDGE HOUSE DELIVERING TRUST

## Wholesaler & Importers,

M/s. Emerson Commercial & Residential Solutions

Dealers: M/s. Kirloskar Pneumatic Co. Ltd.

M/s. Gujarat Fluorochemicals Ltd.

Enriching Lives

## EQUIPMENTS & COMPONENTS. for

**HVAC & R,* COLD ROOMS,* RIPENING CHAMBERS,* HEAT PUMPS.**

Adithya Tower # 23, V.S.N Road, Shivaji Nagar, Bengaluru – 560 051.
Ph. No: 080-22861936, 22860260, 41513104, 41513105 & 41238022
**Email ID :** info@fridgehouse.net; **Web Site:** www.fridgehouse.net


**Contact Persons: M.K. Prasad & Mr. Nagesh D Prabhu – M: 9845217197**

*With Best Compliments from :*

# HOTEL DWARAKA

Anand Rao Circle
BANGALORE-560 009

**N.R. Narayana Rao**
**Managing Partner**




## ವಸತಿ ಗೃಹ

ನಮ್ಮ ವಿಶೇಷತೆಗಳು
ಸಕಲ ಸೌಲಭ್ಯಗಳನ್ನೊಳಗೊಂಡ, ಉತ್ತಮ ಗಾಳಿ, ಬೆಳಕಿರುವ,
ನಿರಂತರ ನೀರು ವಿದ್ಯುತ್ ಸರಬರಾಜಿರುವ, ಅತಿ ಹೆಚ್ಚಿಲ್ಲದ ಬಾಡಿಗೆಯಿರುವ,
ವಿಶಾಲವಾದ ಕೊಠಡಿಗಳು, ಮನಸ್ಸಿಗೆ ಶಾಂತಿ ನೆಮ್ಮದಿ ತರುವ ಶಾಂತ ವಾತಾವರಣ,
ನಮ್ರತೆಯ ಸೇವೆ, ಎಸ್.ಟಿ.ಡಿ./ಐ.ಎಸ್.ಡಿ. ಮತ್ತು
ಕಾರು ನಿಲ್ಲಿಸಲು ಅನುಕೂಲತೆ ಇತ್ಯಾದಿ...

**ದೂರವಾಣಿ : 22265011 (8 ಮಾರ್ಗಗಳು), 22268263, 22268264**